




ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> ಪತ್ತಿನ ಸಹಕಾರ ಚಳವಳಿಯು ಪರಿಣಾಮಕಾರಿಯಾಗಿ, ಗುಣಾತ್ಮಕ ಸೇವೆ ನೀಡುತ್ತಿದೆ. ಈ ವಲಯ ಮತ್ತಷ್ಟು ಜನರನ್ನು ತಲುಪಬೇಕಾಗಿದೆ. ಜನರ ಆರ್ಥಿಕ ಅಗತ್ಯಗಳನ್ನು ಪೂರೈಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಕೆಲಸವನ್ನು ಪತ್ತಿನ ವಲಯ ಮತ್ತಷ್ಟು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಯಾಗಬೇಕಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರು ಪತ್ತಿನ ಸಹಕಾರ ಚಳವಳಿಯಲ್ಲಿ ತೊಡಗಿಸಿಕೊಳ್ಳುವುದರಿಂದ ಮತ್ತಷ್ಟು ಗಣನೀಯ ಸೇವೆ, ಆರ್ಥಿಕ ಸ್ವಾವಲಂಬನೆ ಸಾಧಿಸಿಕೊಳ್ಳಲು ಸಾಧ್ಯವಿದೆ.

# ಪತ್ತಿನ ಸಹಕಾರ ಚಳವಳಿಯ ಬಲವರ್ಧನೆ ಅಗತ್ಯ

ಸಹಕಾರ ಆಂದೋಲನದಲ್ಲಿ ವಿಶೇಷವಾಗಿ ಕೃಷಿ ಪತ್ತು, ಮಾರಾಟ, ಹೈನುಗಾರಿಕೆ ಮತ್ತು ಪತ್ತಿನ ವಲಯಗಳು ಮಹತ್ವದ ಪರಿಣಾಮಕಾರಿ ಕಾರ್ಯ ಮಾಡುತ್ತಿವೆ. ಪ್ರತಿವರ್ಷ ಹೊಸ ಸಹಕಾರ ಸಂಘಗಳ ನೋಂದಣಿ, ಸದಸ್ಯತ್ವ ಹೆಚ್ಚಳವನ್ನು ಕಾಣುತ್ತಿದ್ದೇವೆ. ಆದರೆ ಜನಸಂಖ್ಯೆಗೆ ಹೋಲಿಕೆ ಮಾಡಿದರೆ ಒಟ್ಟಾರೆ ಸದಸ್ಯತ್ವ ಪ್ರಮಾಣ ಶೇ.50ರಷ್ಟು ತಲುಪಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಬಲಿಷ್ಠ ರಾಷ್ಟ್ರಗಳಲ್ಲಿ ಕೆಲವೊಮ್ಮೆ ಆರ್ಥಿಕತೆಯ ಹಿನ್ನಡೆಯನ್ನು ಕಂಡಿದ್ದೇವೆ. ಇಂಥ ಸಂದರ್ಭಗಳಲ್ಲಿ ಸಹಕಾರ ಕ್ಷೇತ್ರವನ್ನು ಅವಲೋಕಿಸಿದಾಗ ಸಹಕಾರ ಚಳವಳಿ ಬಲಿಷ್ಠವಾಗಿರುವುದನ್ನು ಕಾಣುತ್ತೇವೆ.

ಶತಮಾನದ ಹಿಂದೆ ಸೇವಾ ಕ್ಷೇತ್ರವಾಗಿದ್ದ ಸಹಕಾರ ವಲಯ ಇಂದು ಸ್ಪರ್ಧಾತ್ಮಕವಾಗಿ ರಾಷ್ಟ್ರೀಯ, ಖಾಸಗಿ ವಲಯಗಳ ಸವಾಲುಗಳನ್ನು ಎದುರಿಸುವ, ಮುನ್ನಡೆಯುವ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ನೀಡುತ್ತಿರುವುದು ಗಮನಾರ್ಹ ಸಂಗತಿ.

ಪತ್ತಿನ ಸಹಕಾರ ಚಳವಳಿಯು ಪರಿಣಾಮಕಾರಿಯಾಗಿ, ಗುಣಾತ್ಮಕ ಸೇವೆ ನೀಡುತ್ತಿದೆ. ಈ ವಲಯ ಮತ್ತಷ್ಟು ಜನರನ್ನು ತಲುಪಬೇಕಾಗಿದೆ. ಜನರ ಆರ್ಥಿಕ ಅಗತ್ಯಗಳನ್ನು ಪೂರೈಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಕೆಲಸವನ್ನು ಪತ್ತಿನ ವಲಯ ಮತ್ತಷ್ಟು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಯಾಗಬೇಕಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರು ಪತ್ತಿನ ಸಹಕಾರ ಚಳವಳಿಯಲ್ಲಿ ತೊಡಗಿಸಿಕೊಳ್ಳುವುದರಿಂದ ಮತ್ತಷ್ಟು ಗಣನೀಯ ಸೇವೆ, ಆರ್ಥಿಕ ಸ್ವಾವಲಂಬನೆ ಸಾಧಿಸಿಕೊಳ್ಳಲು ಸಾಧ್ಯವಿದೆ. ಹಾಗೆಯೇ ರಾಜ್ಯದಲ್ಲಿರುವ 2 ಲಕ್ಷಕ್ಕೂ ಅಧಿಕ ಸ್ವಸಹಾಯ ಗುಂಪುಗಳು ಕೂಡ ತಾಲ್ಲೂಕು ಮಟ್ಟದಲ್ಲಿ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಿ, ಸಹಕಾರಕಕ್ಷೆಗೆ ಒಳಪಟ್ಟು ಉಳಿತಾಯ, ಉದ್ಯಮಗಳ ಸ್ಥಾಪನೆ, ಗುಡಿ ಕೈಗಾರಿಕೆಗಳಿಗೆ ಒತ್ತು ನೀಡಿ ವ್ಯವಹಾರಗಳ ಕೌಶಲತೆಗಳನ್ನು ಹೆಚ್ಚಿಸಿಕೊಂಡು ಸ್ವಾವಲಂಬಿಗಳಾಗಲು ಧಾವಿಸಿದರೆ ಪತ್ತಿನ ಮಹಾಮಂಡಳವೂ ಉಪಯುಕ್ತ ಮಾರ್ಗದರ್ಶನ ಮಾಡಲಿದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

**ಶ್ರೀ ಕೆ.ಎಸ್. ಗುರುಪ್ರಸಾದ್**
ಸಲಹೆಗಾರರು

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಕರೊನಾ ಹೆಸರಿನಲ್ಲಿ ಪ್ರತಿ ವಾರ ನಡೆಯುತ್ತಿವೆ 2 ಲಕ್ಷ ಸೈಬರ್ ವಂಚನೆ

**ನವದೆಹಲಿ :** ದೇಶಾದ್ಯಂತ ಕಳೆದ ಮೂರು ವಾರಗಳಿಂದ ಪ್ರತಿ ವಾರ ಸುಮಾರು 2 ಲಕ್ಷ ಸೈಬರ್ ವಂಚನೆ ಪ್ರಕರಣಗಳು ಕರೊನಾ ವಿಷಯದಿಂದಲೇ ನಡೆಯುತ್ತಿವೆ. ಅಷ್ಟೇ ಅಲ್ಲ, ಈ ಪ್ರಕರಣಗಳ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿದೆ. ಹಿಂದಿನ ವಾರಗಳಿಗೆ ಹೋಲಿಸಿದರೆ ವಂಚನೆ ಪ್ರಮಾಣದಲ್ಲಿ ಶೇಕಡಾ 30 ಏರಿಕೆಯಾಗಿದೆ!

ಅದ್ಹೇಗೆ ಕರೊನಾ ಹೆಸರಿನಲ್ಲಿ ವಂಚಿಸ್ತಾರೆ ಅಂತೀರಾ? ಕೇಂದ್ರ ಸರ್ಕಾರದ ಆರೋಗ್ಯ ಸೇತು ಆಯಪ್ ಹಾಗೂ ವಿಡಿಯೋ ಕಾಲಿಂಗ್ ಆಯಪ್‌ಗಳ ಹೆಸರಿನಲ್ಲಿ ಜನರ ಖಾತೆಗಳಿಗೆ ಸೈಬರ್ ಹ್ಯಾಕರ್‌ಗಳು ಕನ್ನ ಹಾಕುತ್ತಿದ್ದಾರೆ.

ಆರೋಗ್ಯ ಸೇತು ಸಂಪರ್ಕ ಪತ್ತೆ ಹಚ್ಚುವ ಆಯಪ್, ಜೂಮ್, ಮೈಕ್ರೋಸ್‌ಟಾ ಟೀಮ್ಸ್ ಮತ್ತು ಗೂಗಲ್ ಮೀಟ್‌ನಂತಹ ವಿಡಿಯೋ ಕಾಲಿಂಗ್ ಆಯಪ್‌ಗಳ ಹೆಸರು ಬಳಸಿ ಸೈಬರ್ ಖದೀಮರು ಜನರನ್ನು ವಂಚಿಸುತ್ತಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ), ಮಾನವ ಸಂಪನ್ಮೂಲ ಇಲಾಖೆಗಳು ಅಥವಾ ವಿವಿಧ ಉನ್ನತ ಕಂಪನಿಗಳ ಅಧಿಕಾರಿಗಳ ಹೆಸರಿನಲ್ಲಿ ಜನರ ಮೊಬೈಲ್ ಅಥವಾ ಕಂಪ್ಯೂಟರ್‌ಗಳಿಗೆ ಸುಳ್ಳು ಸುದ್ದಿಗಳು ಮತ್ತು ಲಿಂಕ್‌ಗಳನ್ನು ಸೈಬರ್ ಹ್ಯಾಕರ್‌ಗಳು ಕಳುಹಿಸುತ್ತಿದ್ದಾರೆ.

ಅದರಲ್ಲೂ ಮುಖ್ಯವಾಗಿ 'ನಿಮ್ಮ ನೆರೆಹೊರೆಯವರು ಸೋಂಕಿಗೆ ಒಳಗಾಗಿದ್ದು, ಯಾರ? ಯಾರು ಎಂಬುದನ್ನು ತಿಳಿಯಲು ಲಿಂಕ್ ನೋಡಿ, ನಿಮ್ಮ ಜತೆ ಸಂಪರ್ಕಕ್ಕೆ ಬಂದ ವ್ಯಕ್ತಿಯೊಬ್ಬರು ಸೋಂಕಿಗೆ ಒಳಗಾಗಿದ್ದಾರೆ, ಸ್ವಯಂ ಐಸೋಲೇಷನ್‌ಗೆ ಒಳಗಾಗಲು ಹಾಗೂ ಆರೋಗ್ಯ ಸೇತು ಆಯಪ್ ಬಳಸುವ ಮಾರ್ಗಸೂಚಿಗಳನ್ನು ತಿಳಿಯಿರಿ, ಎಂಬಂತಹ ನಕಲಿ ಲಿಂಕ್‌ಗಳನ್ನು ಇ–ಮೇಲ್ ಅಥವಾ ಮೆಸೇಜ್ ಮೂಲಕ ರವಾನಿಸುತ್ತಾರೆ.

ಮೊದಲೇ ಕರೊನಾದಿಂದ ಆತಂಕಕ್ಕೀಡಾಗಿರುವ ಜನರು ಈ ಲಿಂಕ್‌ಗಳನ್ನು ಕ್ಲಿಕ್ ಮಾಡಿ ವಂಚಕರ ಬಲೆಗೆ ಬಿದ್ದರೆ ಅವರ ವೈಯಕ್ತಿಕ ಮಾಹಿತಿಗಳು ಸೇರಿದಂತೆ ಬ್ಯಾಂಕ್ ಖಾತೆಯಲ್ಲಿನ ಹಣವೂ ಖದೀಮರ ಪಾಲಾಗುತ್ತದೆ.

ಈ ಬಗ್ಗೆ ಭಾರತೀಯ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್‌ಟಿ–ಇನ್) ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ.

**ಸುಭಾಷಿತ :** ಕಬ್ಬಿಣ ತನ್ನ ತುಕ್ಕಿನಿಂದಷ್ಟೇ ನಾಶವಾಗಬಲ್ಲದು. ಹಾಗೆಯೇ, ತನ್ನ ಮನೋಭಾವದಿಂದ ಮಾತ್ರ ವ್ಯಕ್ತಿಯೊಬ್ಬನ ನಿರ್ನಾಮ ಸಾಧ್ಯ. – ರತನ್ ಟಾಟಾ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸಹಕಾರ ಇಲಾಖಾಧಿಕಾರಿಗಳ ಜೊತೆ ಪ್ರಗತಿ ಪರಿಶೀಲನಾ ಸಭೆ

# ಸಹಕಾರ ಕ್ಷೇತ್ರದ ಹಿರಿಮೆ ಹೆಚ್ಚಿಸುವಂತೆ ಕೆಲಸ ನಿರ್ವಹಿಸಲು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸಲಹೆ



**ಬೆಂಗಳೂರು :** ಸಹಕಾರ ಇಲಾಖೆ ವಿಸ್ತಾರವಾದ ಕ್ಷೇತ್ರವಾಗಿದ್ದು, ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ಹೊಸ ಚಿಂತನೆಗಳತ್ತ ಗಮನಹರಿಸಿ ಇಲಾಖೆಯನ್ನು ಬಲವರ್ಧನೆಗೊಳಿಸುವ ಮೂಲಕ ಹಿರಿಮೆ ಹೆಚ್ಚಿಸುವಂತೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಇಲಾಖಾ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಮೇ 20ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೆಂಗಳೂರು ವಿಭಾಗದ ಎಲ್ಲಾ ಡಿಸಿಸಿ ಬ್ಯಾಂಕುಗಳ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರುಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ರೈತರಿಗೂ ಸಹಕಾರ ಸಂಘಗಳಲ್ಲಿ ಸಾಲ ವಿತರಣೆ ಮಾಡಬೇಕೆಂದು ಸಲಹೆ ಮಾಡಿದರು.

ಕೃಷಿ ಸಾಲ ವಿತರಣೆಗೆ ಹೆಚ್ಚಿನ ಆದ್ಯತೆ ನೀಡಬೇಕು, ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ವಿತರಿಸಬೇಕು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕೆಂದು ಸಚಿವರು ತಿಳಿಸಿದರು. ಸಹಕಾರ ಕ್ಷೇತ್ರಕ್ಕೆ ಹೊಸ ರೂಪುರೇಷೆ ಅಗತ್ಯವಾಗಿದೆ. ಹೊಸ ಬದಲಾವಣೆಗಳನ್ನು ನಿರೀಕ್ಷಿಸಲಾಗಿದೆ ಎಂದ ಸಚಿವರು ಆಧುನಿಕ ತಂತ್ರಜ್ಞಾನ ಬಳಸಿ ಸಹಕಾರ ಕ್ಷೇತ್ರ ಪ್ರಗತಿ ಸಾಧಿಸಲು ಬದ್ಧತೆ, ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ಅವರು ತಿಳಿಸಿದರು.

ಪ್ರತಿವರ್ಷ ಕೃಷಿ ಸಾಲ ವಿತರಣೆಯಲ್ಲಿ ಶೇ.25ರಷ್ಟು ಹೊಸ ರೈತರಿಗೆ ಸಾಲ ವಿತರಿಸಬೇಕು, ಬಡವರ ಬಂಧು ಮತ್ತು ಕಾಯಕ ಯೋಜನೆಗಳ ಮೂಲಕ ಬೀದಿಬದಿ ವ್ಯಾಪಾರಿಗಳು ಹಾಗೂ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಆರ್ಥಿಕ ನೆರವು ನೀಡಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸಬೇಕು ಎಂದರು.

ಸಹಕಾರ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಡಾ. ಎನ್. ನಾಗಾಂಬಿಕಾದೇವಿ ಅವರು ಮಾತನಾಡಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಹಣ ದುರುಪಯೋಗ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯ. ಸ್ವಸಹಾಯ ಗುಂಪುಗಳ ಸದಸ್ಯರಿಗೆ ಕಾಯಕ ಯೋಜನೆ ಮೂಲಕ ನೆರವು ನೀಡಿ ಅವರನ್ನು ಉದ್ಯಮಿಗಳನ್ನಾಗಿಸಬೇಕು ಎಂದು ಅವರು ಸಲಹೆ ಮಾಡಿದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಶ್ರೀ ಜಿ.ಟಿ. ದೇವೇಗೌಡ, ಮಾಜಿ ಸಚಿವರು, ಶಾಸಕರು, ಹಾಲಿ ಸಹಕಾರ ಸಂಘಗಳ ನಿಬಂಧಕರಾದ ಎಸ್.ಎನ್. ಪ್ರಸನ್ನಕುಮಾರ್, ಅಪರ ನಿಬಂಧಕರು ಹಾಗೂ ಸಚಿವರ ಆಪ್ತಕಾರ್ಯದರ್ಶಿ ಕೆ.ಎಸ್. ನವೀನ್, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ ನಿರ್ದೇಶಕರಾದ ಮಜ್ಜಿಗೆ, ಅಪರ ನಿಬಂಧಕರುಗಳಾದ ಶಿವಪ್ರಕಾಶ್, ಸಿ.ಎನ್. ದೇವರಾಜ್, ಸರ್ಕಾರದ ಜಂಟಿ ಕಾರ್ಯದರ್ಶಿ ಕೆ.ಎಂ. ಆಶಾ, ಜಂಟಿ ನಿಬಂಧಕರುಗಳಾದ ಪಾಂಡುರಂಗ ಗರಗ್ ಗುರುಸ್ವಾಮಿ, ಲಕ್ಷ್ಮಿಪತಯ್ಯ, ಇಲ್ಯಾಸ್ ಉಲ್ಲಾ ಷರೀಫ್ ಅವರುಗಳು ಸೇರಿದಂತೆ ಜಂಟಿ ನಿಬಂಧಕರು, ಉಪನಿಬಂಧಕರುಗಳು ಉಪಸ್ಥಿತರಿದ್ದರು.

# ಬಡವರ ಬಂಧು ಯೋಜನೆಯಡಿ ಹೆಚ್ಚು ಸಾಲ ವಿತರಿಸಲು ಸಚಿವ
# ಪರಿಶಿಷ್ಟ ಜನರಿಗೆ ಕೃಷಿ ಸಾಲ ವಿತರಿಸಲು ಸಚಿವ
# ಎಸ್.ಟಿ. ಸೋಮಶೇಖರ್ ಸಲಹೆ; 14 ಸಾವಿರ ಕೋಟಿ ರೂ. ಸಾಲ ವಿತರಣೆ

**ಮೈಸೂರು** : ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಮೈಸೂರು ಪ್ರಾಂತದ ಸಹಕಾರ ಇಲಾಖೆಯ ಅಧಿಕಾರಿಗಳ ಸಭೆ ಇತ್ತೀಚೆಗೆ ನಡೆಯಿತು.

14 ಸಾವಿರ ಕೋಟಿ ರೂಪಾಯಿ ಕೃಷಿ ಸಾಲವನ್ನು ರೈತರಿಗೆ ವಿತರಿಸಬೇಕು. ಅಲ್ಲದೆ, ಹೊಸ ಸದಸ್ಯರಿಗೆ ಸಾಲ ವಿತರಣೆಯನ್ನು ಕಡ್ಡಾಯವಾಗಿ ಕೊಡಲೇಬೇಕು. ಜೊತೆಗೆ ಪರಿಶಿಷ್ಟ ವರ್ಗಗಳ ಸಮುದಾಯದವರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ವಿತರಣೆಯಾಗಬೇಕು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು. ಪರಿಶಿಷ್ಟ ಸಮುದಾಯದವರಿಗೆ ಅಲ್ಪ ಪ್ರಮಾಣದ ಕೃಷಿ ಸಾಲ ವಿತರಣೆಯಾಗುತ್ತಿದ್ದು, ಮುಂದೆ ಹೀಗಾಗಬಾರದು. ಹೆಚ್ಚಿನ ಫಲಾನುಭವಿಗಳಿಗೆ ಸಾಲ ವಿತರಣೆ ಮಾಡಬೇಕು ಎಂದು ಸಚಿವರು ಸೂಚಿಸಿದರು.

ಬಡವರ ಬಂಧು ಯೋಜನೆಯಡಿ ಹೆಚ್ಚಿನ ಆದ್ಯತೆ ನೀಡಿ. ಬೀದಿಬದಿ ವ್ಯಾಪಾರ ಮಾಡುವವರ ಬಗ್ಗೆ ಆಸಕ್ತಿ ವಹಿಸಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಈ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ಸಾಲ ನೀಡಿಕೆಯ ಪ್ರಗತಿ ಕುಂಠಿತವಾಗಿದ್ದು, ಹೆಚ್ಚಿನ ಪ್ರಗತಿ ಸಾಧಿಸಬೇಕು. ವ್ಯಾಪಾರಿಗಳು ಸ್ವಾಭಿಮಾನಿಗಳಿದ್ದು, ಸಾಲ ಮರುಪಾವತಿ ಉತ್ತಮವಾಗಿದೆ. ಹೀಗಾಗಿ, ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

### ಸಿವಿಲ್ – ಕ್ರಿಮಿನಲ್ ಪ್ರಕರಣ ಬಗೆಹರಿಸಿ

ಸಹಕಾರ ಸಂಘಗಳ ಹಣ ದುರುಪಯೋಗಕ್ಕೆ ಸಂಬಂಧಪಟ್ಟಂತೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಬಾಕಿ ಇದ್ದು, ಈ ಕುರಿತು ಕೂಡಲೇ ಕ್ರಮ ಕೈಗೊಳ್ಳಲು ಕ್ರಮವಹಿಸಿ ಎಂದು ಸಚಿವರು ಸೂಚಿಸಿದರು.

### ಸಹಕಾರ ಸಂಘಗಳ ಹಣ ದುರುಪಯೋಗ ಸಹಿಸಲ್ಲ

ಸಹಕಾರ ಸಂಘಗಳ ಹಣ ದುರುಪಯೋಗ ಪ್ರಕರಣವನ್ನು ಸಹಿಸುವುದಿಲ್ಲ. ಅಂಥವರ ಮೇಲೆ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣ ಹೂಡಿ ಕ್ರಮ ಕೈಗೊಳ್ಳಬೇಕು. ಬಾಕಿ ಇರುವ ಪ್ರಕರಣಗಳ ಮೇಲೆ ಶೀಘ್ರವಾಗಿ ಕ್ರಮ ಕೈಗೊಳ್ಳಿ. ಆದಷ್ಟು ಜನರ ಪರವಾಗಿ ಕಾರ್ಯನಿರ್ವಹಿಸಿ. ಸಮಸ್ಯೆಗಳಿದ್ದರೆ ನನ್ನ ಗಮನಕ್ಕೆ ತಂದರೆ ಬಗಹರಿಸುವೆ. ಕೆಲಸ ಮಾಡಲು ಆಗುವುದಿಲ್ಲ ಎಂದಾದರೆ ತಿಳಿಸಿ, ನಿಮ್ಮನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

### ಸಮಸ್ಯೆಗಳನ್ನು ಬಗೆಹರಿಸುವೆ

ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸಮಸ್ಯೆ ಇದ್ದರೆ ಗಮನಹರಿಸುತ್ತೇನೆ. ನಾನೂ ಈ ಮೊದಲು ಸುಮಾರು 20 ವರ್ಷ ಅಧ್ಯಕ್ಷನಾಗಿದ್ದೆ. ಹಾಗಾಗಿ ಎಲ್ಲ ಕೆಲಸಗಳ ಬಗ್ಗೆ ನಿಗಾವಹಿಸುತ್ತೇನೆ. ಜೊತೆಗೆ ಮುಡಾ ಸೇರಿದಂತೆ ಹಲವು ಕಡೆ ಇರುವ ಸಮಸ್ಯೆಗಳನ್ನು ಒಂದೊಂದಾಗಿ ಗಮನಹರಿಸಿ ಬಗೆಹರಿಸುತ್ತೇನೆ ಎಂದು ಸಚಿವ ಸೋಮಶೇಖರ್ ತಿಳಿಸಿದರು.



### ಸುಸ್ತಿ ಸಾಲ ವಸೂಲಾಗಲಿ

ಕಾಸ್ಕಾರ್ಡ್ ಬ್ಯಾಂಕ್ ಗಳಲ್ಲಿ ಸಾಲ ವಿತರಣೆ ಹಾಗೂ ವಸೂಲಾತಿಗಳ ಪ್ರಮಾಣ ಬಹಳ ಕಡಿಮೆ ಇದ್ದು, ಪ್ರಗತಿ ಸಾಧಿಸಬೇಕು. ಸುಸ್ತಿ ಸಾಲಗಳ ಪ್ರಮಾಣ ಹೆಚ್ಚಾಗಿದ್ದು, ಅವುಗಳ ವಸೂಲಾತಿಗಾಗಿ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಸೂಚಿಸಿದರು.

### ಸಾಲ ವಿತರಣೆ ಗುರಿ ಹೆಚ್ಚಿಸಿ

ಅಲ್ಪಾವಧಿ ಸಾಲ ಸೇರಿದಂತೆ ಬಹುತೇಕ ಸಾಲ ವಿತರಣೆ ಇನ್ನೂ ಮೊದಲ ಹಂತದಲ್ಲೇ ಇದೆ. ಆದರೆ, ಸಭೆ ನಡೆಸಿದ ಮೇಲಷ್ಟೇ ಸಾಲ ವಿತರಣೆ ಎಂಬ ಕಟ್ಟುಪಾಡಿಗೆ ಬೀಳದೆ ಶೀಘ್ರ ಸಾಲ ವಿತರಣೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಜೊತೆಗೆ ಪ್ರತಿವರ್ಷ ಸಾಲ ವಿತರಣೆ ಪ್ರಮಾಣದ ಗುರಿಯನ್ನು ಹಾಕಿಕೊಳ್ಳುವಾಗ ಹೆಚ್ಚಿನ ವಿತರಣೆ ಮಾಡುವ ಬಗ್ಗೆ ಗುರಿ ನಿಗದಿಪಡಿಸಿಕೊಂಡರೆ ಸಾಲ ವಿತರಣೆ ಪ್ರಮಾಣದಲ್ಲೂ ಹೆಚ್ಚಳವಾಗಲಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಬಾರಿ ಮಳೆ ಉತ್ತಮವಾಗಲಿದೆ ಎಂಬ ವರದಿ ಬಂದಿದೆ. ಹೀಗಾಗಿ ಸರಿಯಾದ ಸಮಯಕ್ಕೆ ರೈತರಿಗೆ ಸಾಲ ವಿತರಣೆ ಮಾಡದಿದ್ದರೆ ಉಪಯೋಗವಾಗದು. ಹೀಗಾಗಿ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಸಹಕಾರ ಸಂಘಗಳಲ್ಲಿ ಹಳಬರಿಗಷ್ಟೇ ಕೆಲವು ಕಡೆ ಸಾಲ ನೀಡಲಾಗುತ್ತಿದ್ದು, ಹೊಸ ಸದಸ್ಯರಿಗೆ ಸಾಲ ವಿತರಣೆಯಾಗಬೇಕು. ಈ ಬಗ್ಗೆ ಗಮನಹರಿಸಿ ಎಂದರು.

ಸಚಿವರ ಆಪ್ತ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ಅಪರನಿಬಂಧಕರಾದ ಕೆ.ಎಸ್. ನವೀನ್, ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಆರ್.ಪ್ರಕಾಶ್ ರಾವ್ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,

ನಂ16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಸಂಖ್ಯೆ : ಕರಾಸಪಸಂಮನಿ/2019–20 ದಿನಾಂಕ : 01–06–2020

ಗೆ,

**ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ**
**ಮುಖ್ಯಕಾರ್ಯನಿರ್ವಹಣಾಧಿಕಾರಿಗಳು**

– – – – – – – – – – – – – – – – –
– – – – – – – – – – – – – – – – –

**ವಿಷಯ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಇದರ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡುವ ಕುರಿತು ಮನವಿ.**

ಮಾನ್ಯರೇ

ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಹಕಾರಿ ರತ್ನ ಪುರಸ್ಕೃತರು ಆದ ಸನ್ಮಾನ್ಯ "ಶ್ರೀ ಬಿ.ಎಲ್.ಲಕ್ಕೇಗೌಡ"ರವರ ಪರಿಶ್ರಮದಿಂದ ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಒಕ್ಕೂಟ ವ್ಯವಸ್ಥೆಯ ಉದ್ದೇಶಕ್ಕೆ ಈ ಮಹಾಮಂಡಳವು 2004ರಲ್ಲಿ ಸ್ಥಾಪನೆಯಾಗಿದೆ. ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗೆ ಶಿಕ್ಷಣ ತರಬೇತಿ ಮಾರ್ಗದರ್ಶನದ ಜೊತೆ ಜೊತೆಗೆ ಸಹಕಾರ ಸಂಘಗಳ ಸಮಸ್ಯೆ ಮತ್ತು ಆಶೋತ್ತರಗಳಿಗೆ ಸ್ಪಂದಿಸಿ ಲೆಕ್ಕಪರಿಶೋಧಕರ ವರದಿಯಲ್ಲಿ "ಎ"ದರ್ಜೆಯ ಮಹಾಮಂಡಳವಾಗಿ ಗುರುತಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಎಂದು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಪ್ರಸ್ತುತ ಮಹಾಮಂಡಳವು ಮೇಲ್ಕಂಡ ವಿಳಾಸದ ಕಟ್ಟಡವನ್ನು ಲೀಸ್‌ಗೆ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿದ್ದು, ಮಹಾಮಂಡಳವು ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ) ವ್ಯಾಪ್ತಿಯಲ್ಲಿನ ನಂದಿನಿ ಬಡಾವಣೆ, ಬೆಂಗಳೂರು ಇಲ್ಲಿ 3594.38 ಚದರ ಅಡಿಯ ಮೂಲೆ ನಿವೇಶನವನ್ನು ಇ–ಹರಾಜು ಪ್ರಕ್ರಿಯೆಯ ಮೂಲಕ ಖರೀದಿಸಿದ್ದು ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಸುಮಾರು ರೂ. 2.5 ಕೋಟಿ ರೂಗಳ ಅಂದಾಜು ಪಟ್ಟಿ ಸಿದ್ದಪಡಿಸಲಾಗಿದೆ.

ಕಟ್ಟಡ ನಿರ್ಮಾಣ ಕಾರ್ಯದ ಉದ್ದೇಶ ಸಾಧನೆಗೆ ಮಾನ್ಯ ಸದಸ್ಯ ಸಹಕಾರ ಸಂಘಗಳ ಆಡಳಿತಮಂಡಳಿಯವರ ಮಾರ್ಗದರ್ಶನ ಮತ್ತು ಆರ್ಥಿಕ ಧನ ಸಹಾಯ ಅತೀ ಮುಖ್ಯವಾಗಿದ್ದು, ತಾವುಗಳು ತಮ್ಮ ಸಹಕಾರ ಸಂಘದ ಮೂಲಕ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಆರ್ಥಿಕ ನೆರವು ನೀಡಲು ಈ ಮೂಲಕ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

25,000/–ರೂ ಗಳಿಗೂ ಹೆಚ್ಚು ದೇಣಿಗೆ ನೀಡಿದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಹೆಸರುಗಳನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಿ ಶಾಶ್ವತವಾಗಿ ಸಾರ್ವಜನಿಕವಾಗಿ ಉಳಿಯುವಂತೆ ಮಾಡಲು ಆಡಳಿತಮಂಡಳಿ ತೀರ್ಮಾನಿಸಿರುತ್ತದೆ.

ಆದುದರಿಂದ ಸಹಕಾರಿ ಬಂಧುಗಳಾದ ತಾವುಗಳು ತಮ್ಮ ಸಹಕಾರ ಸಂಘದ ಮೂಲಕ ಕಟ್ಟಡ ನಿಧಿಗೆ ಹೆಚ್ಚಿನ ಮಟ್ಟದಲ್ಲಿ ದೇಣಿಗೆ ನೀಡಿ ಸುಸಜ್ಜಿತ ಹಾಗೂ ಆದುನಿಕ ವಿನ್ಯಾಸದ ಕಟ್ಟಡ ನಿರ್ಮಾಣಕ್ಕೆ ಸಹಾಯ ಮಾಡಿ ಸಹಕರಿಸಲು ಮಹಾಮಂಡಳದ ಆಡಳಿತಮಂಡಳಿ ಸದಸ್ಯರುಗಳ ಪರವಾಗಿ ತಮ್ಮಲ್ಲಿ ಹಾಗೂ ತಮ್ಮ ಆಡಳಿತಮಂಡಳಿ ಸದಸ್ಯರುಗಳಲ್ಲಿ ಕೋರುತ್ತೇವೆ.

ವಂದನೆಗಳೊಂದಿಗೆ.
ತಮ್ಮ ವಿಶ್ವಾಸಿಗಳು

| | |
|---|---|
| ಸಹಿ/– | ಸಹಿ/– |
| **(ಡಾ. ಬಿ.ಡಿ. ಭೂಕಾಂತ)** | **(ಕೆ.ಲಲಿತ ಜಿ.ಟಿ.ದೇವೇಗೌಡ)** |
| ಉಪಾಧ್ಯಕ್ಷರು | ಅಧ್ಯಕ್ಷರು |

ಮಹಾಮಂಡಳದ ಆಡಳಿತಮಂಡಳಿ ಸದಸ್ಯರು

**ವಿಶೇಷ ಸೂಚನೆ :**

ದೇಣಿಗೆ ಹಣವನ್ನು ಮಹಾಮಂಡಳಕ್ಕೆ ಕಳುಹಿಸಿ ಕೊಡಲು ಬ್ಯಾಂಕಿನ ಖಾತೆಯ ವಿವರ ಈ ಕೆಳಗೆ ನಮೂದಿಸಲಾಗಿದೆ.

| | | |
|---|---|---|
| 1. ಬ್ಯಾಂಕಿನ ಹೆಸರು | : | The Karnataka State Co-op. Apex Bank Ltd., |
| 2. ಖಾತೆಯ ಹೆಸರು | : | Karnataka State Co-op. Credit Societies Federation Ltd., |
| 3. ಖಾತೆ ಸಂಖ್ಯೆ | : | 1014111030000018 |
| 4. ಖಾತೆಯ ವಿಧಾನ | : | Current Account |
| 5. ಶಾಖೆಯ ಹೆಸರು | : | Vyalikaval Branch, Bangalore-560003 |
| 6. ಐ.ಎಫ್.ಎಸ್.ಸಿ. ಕೋಡ್ | : | KSCB 0000001 |



# “ಲಂಕೇಶರನ್ನು ನಾನೇಕೆ ಓದುತ್ತೇನೆ?”

**ಜಾಣ ಜಾಣೆಯರೆ,**

ಎನ್ನುತ್ತಾ ದಿಕ್ಕು, ದೆಸೆಯಿಲ್ಲದೆ ಓದುವುದಕ್ಕೂ, ಬರೆಯುವುದಕ್ಕೂ ಒಂದು ಗುರಿ ಇಲ್ಲದೆ ಸಿಕ್ಕಿದ್ದೇ ಓದುತ್ತಾ ಅಲೆಯುತ್ತಿದ್ದ ಅತೃಪ್ತ ಬ್ಯೂಟಿಫುಲ್ ಮನಸ್ಸುಗಳನ್ನು ಸೆಳೆದು ಕೂರಿಸಿದ್ದೇ ನಮ್ಮ ಜಾಣರಲ್ಲಿ ಜಾಣರು ಲಂಕೇಶರು.

**ಲಂಕೇಶರನ್ನು ನಾನ್ಯಾಕೆ ಓದಬೇಕು? ಅಥವಾ ನಾನೇಕೆ ಲಂಕೇಶರನ್ನು ಓದುತ್ತೇನೆ ?**

ಎರಡೂ ಪ್ರಶ್ನೆಗಳು ಬೇರೆ ಬೇರೆ ಅನ್ನಿಸಿದರೂ ಉತ್ತರ ಮಾತ್ರ ಒಂದೇ. ಲಂಕೇಶರನ್ನಲ್ಲದೆ ಇನ್ನ್ಯಾರನ್ನು ಓದಬೇಕು? ಇದು ನನ್ನ ಮರು ಪ್ರಶ್ನೆ. ಲಂಕೇಶರಿಗಿಂತ ಮೊದಲು ಯಾರ್ ಯಾರನ್ನೋ ಓದಿ, ಅರಿವೆಗೆಟ್ಟು, ಬುದ್ದಿಗೆಟ್ಟು ಅವರು ಬರೆದದ್ದೇ ನಿಜವೆಂದು ನಂಬಿ ಅವುಗಳನ್ನೇ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಆ ದಿಕ್ಕಿನಲ್ಲಿ ಹೆಜ್ಜೆ ಇಟ್ಟಾಗಿತ್ತು. ಕುಳಿತು ತೂಕಡಿಸುವಾಗ ಕತ್ತು ಬಲಪಕ್ಕಕ್ಕೇ ವಾಲುವಂತೆ, ನಾನೂ ಆ ಕಡೆಯೇ ವಾಲುತ್ತಿದ್ದಾಗ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ ಬಲಕ್ಕೆ ವಾಲಿದ್ದ ಕತ್ತನ್ನು ಸರಿಯಾಗಿಸಿ ಎಚ್ಚರಗೊಳ್ಳುವಂತೆ ಮಾಡಿದವರು ಲಂಕೇಶರು.ಆಗ ಎಚ್ಚರಗೊಂಡ ಮಿದುಳು ಮತ್ತೆ ತೂಕಡಿಸಲಿಲ್ಲ. ಗಿಡವಾಗಿದ್ದಾಗಲೇ ಬಗ್ಗಿಸಬೇಕು ಎಂಬಂತೆ ವಿದ್ಯಾರ್ಥಿಗಳು ಸಣ್ಣ ವಯಸ್ಸಿನಲ್ಲೇ ಎಚ್ಚರಗೊಳ್ಳಬೇಕೆಂದರೆ ಲಂಕೇಶರನ್ನು ಓದಬೇಕು. ಆ ವಿಶ್ವವಿದ್ಯಾಲಯದಲ್ಲಿ ಏನುಂಟು, ಏನಿಲ್ಲ ? ಸಾಣೆ ಹಿಡಿಯುವ ಚಕ್ರಕ್ಕೆ ಸಿಕ್ಕಿದ ಏನೇ ಆಗಲಿ ಹೊಳೆಯುವಂತೆ ತನ್ನ ತನ್ನ ಮಡಿಲಿಗೆ ಬಂದು ಬೀಳುವ ಎಲ್ಲರನ್ನೂ ತನ್ನ ಅರಿವಿನ ಸ್ನಾನ ಮಾಡಿಸಿ ಹೊಳೆಹೊಳೆಯುವಂತೆ ಮಾಡುವ ಶಕ್ತಿ ಲಂಕೇಶರ ಬರವಣಿಗೆಯಲ್ಲಿತ್ತು.

ಏನುಂಟು, ಏನಿರಲಿಲ್ಲ ಲಂಕೇಶರಲ್ಲಿ. ಪೂಜಿಸಲು ಹರಿವಾಣದಲ್ಲಿರುವ ಎಲ್ಲಾ ಹಣ್ಣುಗಳಿರುವಂತೆ ಅವರ ಅರಿವಿನ ಹರಿವಾಣದಲ್ಲಿ ಇಲ್ಲದಿರುವ ವಿಷಯಗಳೇ ಇರಲಿಲ್ಲ. ಸಣ್ಣ ಹುಡುಗರಿಂದ ಹಿಡಿದು ವಯೋವೃದ್ಧರಿಗೂ ಏನಾದರೊಂದು ತಿಳುವಳಿಕೆ ನೀಡುವ ಪ್ರತಿಯೊಂದು ಹಾಳೆಯೂ ಬೆಲೆಬಾಳುವಂತಾದ್ದು. ಏನಾದರೊಂದು ಸಂದೇಶ ಇರುತ್ತಿದ್ದ ನೀಲು, ಇರುತ್ತಿದ್ದ ಎಂಟತ್ತು ಪದಗಳಲ್ಲೇ ಓದುಗರಲ್ಲಿ ಕಚಗುಳಿ ಮೂಡಿಸುವ, ಗಾಢ ಚಿಂತನೆಗಚ್ಚುವ, ಅಬ್ಬಾ ನಮಗ್ಯಾಕೆ ಇದೆಲ್ಲಾ ಕಾಣಿಸುವುದಿಲ್ಲ ಎಂದೆನ್ನಿಸುವಂತೆ ಕಾಡಿಸುತ್ತಿದ್ದ ನೀಲು ಇವತ್ತಿಗೂ ಎಲ್ಲರ ಡಾರ್ಲಿಂಗ್.

ಇನ್ನು ಮರೆಯುವ ಮುನ್ನ, ನನ್ನ ಅಚ್ಚುಮೆಚ್ಚಿನದು.ಯಾಕೆಂದರೆ ಅದರಲ್ಲಿ ಲಂಕೇಶರ ವೈಯಕ್ತಿಕ ಬರಹ ಸಾಕಷ್ಟು ಇರುತ್ತಿದ್ದರಿಂದ. ಯಾವೊಂದು ಚಿತ್ರ ನಟರ ವಿಷಯಕ್ಕಾಗಿ ಅತ್ಯಂತ ಕುತೂಹಲದಿಂದ ಪೇಪರ್ ಮತ್ತು ಮ್ಯಾಗಜಿನಳನ್ನು ಓದುತ್ತಿದ್ದೆವೋ ಹಾಗೆಯೇ ಲಂಕೇಶರ, ಆ ವಾರದಲ್ಲಿ ಆಫೀಸಿಗೆ ಬಂದವರ, ಹೋದವರ, ಬೈದವರ, ಸಣ್ಣತನವ ಕಂಡುಹಿಡಿದಿದ್ದರ, ಇಸ್ಪೀಟ್ ಆಡಿದ್ದರ, ಕುಡಿದಿದ್ದರ, ರೇಸಿಗೆ ಹೋಗಿ ದುಡ್ಡು ಕಳೆದಿದ್ದರಾ, ಹಾಗೇ ದುಡ್ಡಿನ ಬಗ್ಗೆ ಎಚ್ಚರವಿರಲಿ ಎಂದು ಹೇಳಿದ್ದರ, ಮುನಿಸಿಕೊಂಡಿದ್ದರ, ನಕ್ಕರಾ, ಬರೆದರಾ ಎಂಬ ಎಲ್ಲಾದರ ವಿವರಗಳು ಅಲ್ಲಿರುತ್ತಿದ್ದರಿಂದ, ಅದನ್ನೆಲ್ಲ ಓದಿ ಆತ್ಮ ತೃಪ್ತಿಗೊಳ್ಳುತ್ತಿತ್ತು.ಹಾಗೇ ಅವರನ್ನು ಅನುಕರಿಸಿ ಒಳಗೊಳಗೇ ಹೆಮ್ಮೆ ಪಡುತ್ತಿದ್ದುದೂ ಉಂಟು.

**ಇನ್ನು ರಾಜಕೀಯವೋ,**

ಅವರ ರಕ್ತದಲ್ಲೇ ಸದಾ ಹರಿದಾಡುತ್ತಾ ಬಿಸಿಯಾಗಿಸುತ್ತಿದ್ದ ವಿಷಯವಾಗಿತ್ತು. ಅವರ ತೀಕ್ಷ್ಣ ಬರವಣಿಗೆಯಿಂದಲೇ ಕರ್ನಾಟಕ ರಾಜಕೀಯ ಏನೆಲ್ಲಾ ತಿರುವು ಪಡೆದಿತ್ತೆಂಬುದು ಎಲ್ಲರಿಗೂ ತಿಳಿದಿದೆ. ಎಲ್ಲಾ ಮಂತ್ರಿ, ಕಂತ್ರಿಗಳನ್ನು ಹದ್ದುಬಸ್ತಿನಲ್ಲಿಟ್ಟು ಗಡಗಡ ನಡುಗಿಸಿದ್ದರಲ್ಲ. ಭ್ರಷ್ಟರು ಲಂಚಮುಟ್ಟುವಾಗ ದೇವರನ್ನು ನೆನೆಯದೆ (ದೇವರು ಯಾವಾಗ ಹೇಗೆ ಕಾಪಾಡುತ್ತಿದ್ದನೋ ಗೊತ್ತಿಲ್ಲ) ಲಂಕೇಶರನ್ನು ನೆನೆದು ಹೆದರುತ್ತಿದ್ದರಲ್ಲ. ಚಾಟಿ ಏಟನಂತಿರುತ್ತಿದ್ದ ಅವರ ಬರಹಗಳಿಂದಲೇ ಚುರುಕು ಮುಟ್ಟಿಸಿಕೊಂಡು ಸುಮಾರಾಗಿ ಕೆಲಸ ಮಾಡಿದವರಿದ್ದಾರೆ. ಲಂಕೇಶರೆಂದರೆ ಕನಸಲ್ಲೂ ಬೆಚ್ಚಿಬೀಳುತ್ತ, ಅವರು ತೀರಿದಾಗ ಬೆಳಿಗ್ಗೆದ್ದು ಹಾಲು ಕುಡಿದವರಿದ್ದಾರೆ. ಒಬ್ಬ ಲೇಖಕನೆಂದರೆ ಹಾಗೇ ಇರಬೇಕಲ್ಲವೇ. ತಿದ್ದುತ್ತಾ, ತೀಡುತ್ತಾ, ಚಾಟಿಬೀಸುತ್ತಾ, ಕರ್ನಾಟಕದ ಜನರಿಗೆ ಒಂದಷ್ಟು ವರ್ಷಗಳ ಕಾಲ ನೆಮ್ಮದಿ ಕಾಣಿಸಿದ ಲಂಕೇಶ್ ಅವರು ಈಗ ಇರಬೇಕಿತ್ತು.

ಈಗ ಇಡೀ ದೇಶದಲ್ಲಿ ನಡೆಯುತ್ತಿರುವ ಕ್ರೌರ್ಯ, ದೌರ್ಜನ್ಯ ನೋಡಿ ಏನೇನು ಬರೆಯುತ್ತಿದ್ದರೋ, ಹೇಗೆಲ್ಲಾ ಎಚ್ಚರಿಸುತ್ತಿದ್ದರೋ, ಎಷ್ಟೆಲ್ಲಾ ಸಿಡುಕುತ್ತಿದ್ದರೋ, ಜೊತೆಯಲ್ಲಿ ಬೀದಿಗಿಳಿಯುತ್ತಿದ್ದರೋ, ಕಣ್ಣೊರೆಸಿ ಸಮಾಧಾನ ಮಾಡುತ್ತಿದ್ದರೋ...

ಸಿನಿಮಾದ ಮೋಹವನ್ನು ಮೀರಿದವರಾರಿದ್ದಾರೆ. ತಮ್ಮ ಬಿಡುವಿರದ ಸಮಯದಲ್ಲೂ ಸಿನಿಮಾದ ಮಾಯಾಲೋಕದೊಳಗೆ ಹೊಕ್ಕು, ನಟಿಸಿ, ಸಾಹಿತ್ಯ ರಚಿಸಿ, ನಿರ್ದೇಶಿಸಿ, ಏನೂ ಪೆಟ್ಟುತಿನ್ನದೆ ಈ ಚೆಬಂದವರು ಲಂಕೇಶ್ ಅವರು. ಅದರಲ್ಲಿರುವ ಕಷ್ಟ, ನಷ್ಟ ಸಣ್ಣತನ, ಮೋಹ ಎಲ್ಲವನ್ನೂ ವಿವರಿಸಿ ಬರೆದು ಹಾಗೇ ಎಚ್ಚರಿಕೆಯನ್ನೂ ಕೊಟ್ಟರು. ಸಿನಿಮಾ ಎಂದರೆ ಸಿನಿಕತನವೇ ಎಂದು ವಿವರಿಸಿದರು. ಯಾರನ್ನೂ ಬಿಡದ ಸಿನಿಮಾ ಮೋಹ, ಯಾಕೆ ಬಿಡಬೇಕೆಂದು ಕೇಳಿದರು. ನಾವಂದುಕೊಂಡಿರುವ ಸಿನಿಮಾ ಎಂದರೆ ರಂಗು, ರಂಗಿನ ಲೋಕ ಎನ್ನುವ ಮಿಥ್ಯವನ್ನು ತೆಗೆದರು. ರಂಗೂ ಇದೆ ಆದರೆ ಮಂಗನಾಗಬೇಡಿ ಎಂದು ಹೇಳುತ್ತಲೇ, ದೇಶ ವಿದೇಶದ ನಟನಟಿಯರನ್ನು ಕರೆತಂದು ಪರಿಚಯಿಸಿದರು. ಕತೆಗಳನ್ನು ಹೇಳಿ ಹೇಗೆ ಅದರೊಳಗೆ ಹೊಕ್ಕುವುದು, ಚಕಿತಗೊಳ್ಳುವುದು ಮುಂತಾದವನ್ನು ಬರೆದು ಚಲನಚಿತ್ರ ಪ್ರಿಯರಿಗೆ ಸಮಾಧಾನ ನೀಡಿದರು. ಬರೆದಿದ್ದ ಕಾಲಂಗಳೆಲ್ಲ ಸೇರಿ ಒಂದು ಪುಸ್ತಕದ ಸಂಗ್ರಹವಾಗಿದೆ ಈ ನರಕ,ಈ ಪುಲಕ ಎಂದು.ಯಾವುದೂ ಬರೀ ಒಣಬರಹವಾಗಿರದೆ ರಸಭರಿತವಾಗಿ, ಕೊಂಕು, ಗಿಂಕು ಸೇರಿಸಿ ಚಪ್ಪರಿಸಿ ಓದುವಂತಿರುತ್ತಿತ್ತು. ಸಿನಿಮಾದ ಓದು ಓದಿದ ಮೇಲೆ ಒಂದು ಮಧುರವಾದ ರೋಮಾಂಚನ, ಕಚಗುಳಿಯ ಸವಿಯಿಲ್ಲದೆ ಇರದೇ ಇರಲಿಲ್ಲ. ಸಿನಿಮಾದವರ ಜೀವನ ಶೈಲಿಯ ಬಗ್ಗೆ ಹೇಳುತ್ತಾ ಒಂದು ಕಡೆ ಬರೆಯುತ್ತಾ, ಹಿಂದಿ ನಟಿಯರಾದ, ಅಕ್ಕ ತಂಗಿಯರಾದ ತನುಜಾ ಮತ್ತು ನೂತನ್, ಅವರಿಬ್ಬರೂ ಹೇಗೆ ವಿಭಿನ್ನ ಎಂದು, ನೂತನ್ ಅವರು ಬಹಳ ಮಡಿವಂತಿಕೆಯಿಂದ ಬದುಕಿದ್ದು, ಬಹಳ ಬೇಗ ಸಾವನ್ನಪ್ಪಿದ್ದು, ಆದರೆ ತನುಜಾರು ಜೀವನದ ಎಲ್ಲಾ ಜೀವಂತಿಕೆಯನ್ನು, ಚಂದದ ಕ್ಷಣಗಳನ್ನು ಅನುಭವಿಸಿ ಈಗಲೂ ಎಷ್ಟು ಲವಲವಿಕೆಯಿಂದಿದ್ದಾರೆ ಎಂದಿದ್ದಾರೆ. ಎಂತಹ ಗೂಢಾರ್ಥ ಇದೆ ಇದರಲ್ಲಿ. ಯುವಜನರು ನಟನಟಿಯರನ್ನು ಆರಾಧಿಸುವುದನ್ನು ಬಿಟ್ಟು ಲಂಕೇಶರನ್ನು ಆರಾಧಿಸಲಿ, ಆಗ ನೋಡಲಿ ಅವರಲ್ಲಾಗುವ ಬದಲಾವಣೆ. ಬದುಕುವ ದಾರಿ ಸಿಗದೇನು ಅಲ್ಲಿ ? ಒಂದು ಆದರ್ಶ ರೂಪುಗೊಳ್ಳದಿದ್ದರೆ ಕೇಳಿ ಅಲ್ಲಿ? ಸಿನಿಕತನದಿಂದ ಹೊರಬರದಿದ್ದರೆ ನೋಡಿ. ಮೋಹಿಸುವುದಿದ್ದರೆ ಲಂಕೇಶರನ್ನೇ ಮೋಹಿಸಲಿ, ನಂತರ ಅವರೇ ಒಂದು ರೂಪಕವಾಗುವುದಿಲ್ಲವೇನು ಪರೀಕ್ಷಿಸಲಿ !! ಯಾರೊಬ್ಬರ ಮೇಲಾದರೂ ಹುಚ್ಚು ಬೆಳೆಸಿಕೊಳ್ಳುವುದಿದ್ದರೆ ಲಂಕೇಶರ ಪುಸ್ತಕದ ಮೇಲೆ ಬೆಳೆಸಿಕೊಳ್ಳಲಿ. ರೂಪಾಂತರಗೊಳ್ಳಲಿ.

ನಂದಿ ನೋಡದವರು ಹಂದಿಗೆ ಸಮವಂತೆ ಎನ್ನುವಂತೆ, ಲಂಕೇಶ್ರನ್ನು ಓದದವರು... ಏನು ಹೇಳುವುದು ಅವರ ದುರಾದೃಷ್ಟಕ್ಕೆ...

ಈಗಿನ ವಿದ್ಯಾರ್ಥಿಗಳೋ, ಹೊಸದಾಗಿ ಓದುವುದಕ್ಕೆ ಸಾಹಿತಿಯನ್ನು



ಹುಡುಕುತ್ತಿರುವವರೋ ಸುಮ್ಮನೆ ಲಂಕೇಶರನ್ನು ಹಿಡಿಯಲಿ, ಆ ಹಿಡಿದ ಬೆರಳನ್ನು ತನ್ನ ಮುಷ್ಟಿಯಲ್ಲಿ ಇಟ್ಟು ಬೆಚ್ಚಗಿನ ಅನುಭವವನ್ನು ನೀಡುವುದು ಲಂಕೇಶರ ಮಮತಾಮಯಿ ಬರವಣಿಗೆಯಲ್ಲಿದೆ.

ಅವರ ಕಾದಂಬರಿ ಮುಸ್ಸಂಜೆ ಕಥಾ ಪ್ರಸಂಗದಲ್ಲಿ ಬರುವ ಆಣೆಬಡ್ಡಿ ರಂಗಮ್ಮನ ಪಾತ್ರ ಎಷ್ಟು ಜೀವನ್ಮುಖಿಯದ್ದು.ಆಕೆ ಎಲ್ಲಾ ಸೋಗಲಾಡಿಗಳ ಒಳಹೊಕ್ಕು ಹಿಂದೂ ಮುಂದೂ ನೋಡದೆ ಮುಖವಾಡ ಕಳಚುವ ರೀತಿ ಇದೆಯಲ್ಲ...

ಅದರಲ್ಲೂ ಮೇಟ್ರ ಎಂದು ಕೂಗಿ ಅವರಿಗೆ ಬೈಯ್ಯುವುದು, ಅಣಕಿಸುವುದು, ಮಾಡಿದರೆ ಮೇಷ್ಟು ಎಂದರೆ ದೇವರೆಂದೇ ಭಾವಿಸಿರುವ, ಭಯಭಕ್ತಿಯ ಭಾವ ಉದಯಿಸುವವರನ್ನು, ಪೂಜಿಸುವಂತವರಿಗೂ ಒಂದು ಕ್ಷಣ ಕಕ್ಕಾಬಿಕ್ಕಿಯಾಗಿ ನಾವೂ ಅಲ್ಲಿಂದ ಕಾಲು ಕೀಳಬೇಕೆನಿಸುವಂತೆ ಕಟ್ಟಿದ್ದಾರೆ.

ನಾಗರಹಾವು ಕಥೆಯ ಮೇಷ್ಟೇ ಎಂದು ಹೇಳಿ ಅವರನ್ನು ಉಪ್ಪರಿಗೆಯ ಮೇಲೆ ಕೂರಿಸಿದ್ದನ್ನೂ ನೋಡಿದಾಗ, ಅವೆರಡೂ ಪಾತ್ರಗಳು ಹೇಗೆ ವಿರುದ್ಧವಾದ ಪಾತ್ರ ಪೋಷಣೆಯಿದ್ದರೂ ಮನಸ್ಸಿನಲ್ಲುಳಿಯುತ್ತವೆ.

ಆಣೆಬಡ್ಡಿ ರಂಗಮ್ಮನಂತ ಹೆಣ್ಣು ಮಗಳು ಕೊನೆಯಲ್ಲಿ ತೆಗೆದುಕೊಳ್ಳುವ ತೀರ್ಮಾನ ತೀರಾ ಅನಿರೀಕ್ಷಿತ.ಆದರೆ ಬಹಳ ಅವಶ್ಯ. ಊರಿನ ಜನರನ್ನು ಎದುರಿಸಿ ನಿಂತ ರೀತಿ... ನಾವೆಲ್ಲರೂ ಎದ್ದು ನಿಂತು ಚಪ್ಪಾಳೆ ಹೊಡೆಯುವಂತಾದ್ದು.ಈಗಿನ ಪ್ರತಿ ಊರಿಗೂ, ಒಂದೊಂದು ಮನೆಯಲ್ಲೂ ಇರಬೇಕಾಗಿರುವ ಸುಂದರ ಮನಸ್ಸು.

ಎಲ್ಲಿ ನೋಡಿದರಲ್ಲಿ ಮಿತಿ ಮೀರಿ ನಡೆಯುತ್ತಿರುವ ದೌರ್ಜನ್ಯ, ಮೋಸ, ಅಂತರ್ಜಾತೀಯ ಮದುವೆಗಳ ನಂತರದ ಕೊಲೆಗಳಿಗೆ ಉತ್ತರವೆಂಬಂತಿದೆ. ಹಾಗೆಯೇ ಅಕ್ಕ ಕಾದಂಬರಿಯಲ್ಲಿ ಅನಾಥ ಅಕ್ಕತಮ್ಮನ ಅನುಬಂಧ ಹೇಗಿರುತ್ತದೆ ಎಂಬುದನ್ನು ಕರುಳು ಕಿವುಚುವಂತೆ ಬರೆದಿದ್ದಾರೆ. ಒಬ್ಬರಿಗೊಬ್ಬರು ಹೇಗೆ ಆತುಕೊಂಡು, ಆವರಿಸಿಕೊಂಡು ಬೈದುಕೊಂಡು, ತಳಮಳಿಸಿಕೊಂಡು, ಹಂಬಲಿಸಿಕೊಂಡು... ಅಬ್ಬಾ ಬಡವರಾದರೇನು ಭಾವನೆಗಳಿಗೆ ಬಡತನವೇ ?

ಪುಸ್ತಕದ ಕೊನೆಯಲ್ಲಿ ಬರೀತಾರೆ, ಸುತ್ತಲಿನ ಪ್ರಪಂಚವನ್ನು ಹಾಗೇ ನೋಡಿದರೆ ಎಲ್ಲವೂ ಕಾಣುವುದು.ಅದನ್ನೆಲ್ಲಾ ಗ್ರಹಿಸುವ ಸೂಕ್ಷ್ಮತೆ ಬೆಳೆಸಿಕೊಳ್ಳಬೇಕು. ದಾರಿಹೋಕ ನೋಡುವ, ಚಿಂತಿಸುವ, ಸ್ವವಿಮರ್ಶೆ ಮಾಡಿಕೊಳ್ಳುವ ತರಹದವನಾಗಿದ್ದರೆ ಅವನಿಗೆ ಒಂದಲ್ಲ ಒಂದು ದಿನ ಈ ಅಕ್ಕ ತಮ್ಮ ಸಿಗುತ್ತಾರೆ. ಕ್ಯಾತನ ಹಟ್ಟಿ, ಅವನ ಅಕ್ಕ, ಅವರಿಬ್ಬರನ್ನು ಸುತ್ತುವರಿದ ರಾಜಕೀಯ ಎಲ್ಲವೂ ಆ ದಾರಿಹೋಕನಲ್ಲಿ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ...

ರಾಜಕೀಯ ಹೇಗೆ ಒಂದಕ್ಕೊಂದು ತಕ್ಕೆ ಹಾಕಿ ಬದುಕನ್ನು ಛಿದ್ರ ಮಾಡುತ್ತದೆ ಎಂದು ಬಹಳ ಸಂಕ್ಷಿಪ್ತವಾಗಿ ಹೆಣೆದಿದ್ದಾರೆ.

ಮೇಲಿನೆರಡು ಉದಾಹರಣೆಗಳೇ ಸಾಕು ಜಗತ್ತಿನ ಅತೀ ಹೆಚ್ಚು ಬಾಧಿಸಲ್ಪಡುತ್ತಿರುವ ಸಮಸ್ಯೆಗಳ ಆಳಹೊಕ್ಕು ನೋಡುವುದಕ್ಕೆ ಮತ್ತು ಪರಿಹಾರವಿದೆ ಎಂದು ಹೇಳುವುದಕ್ಕೆ. ಒಂದು ಒಳಕಣ್ಣನ್ನು ಯಾವಾಗಲೂ ತೆರೆದಿಟ್ಟುಕೊಂಡಿರಿ ಎಂದು, ಮನಸ್ಸಿನಾಳದಿಂದ ಮಿಡಿಯಿರಿ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.



ಅಯ್ಯೋ ಅವರು ಈಗ ಇರಬೇಕಿತ್ತು ಎಂದು ಹಳಹಳಿಸುವುದು ಬಹುಶಃ ಲಂಕೇಶ್ ಎಂಬ ಸಾಹಿತಿಯೊಬ್ಬರಿಗೆ ಮಾತ್ರವೇ ಇರಬಹುದು. ಈಗಲಂತೂ ಅವರ ಕೊರತೆ ಬಹುವಾಗಿ ಕಾಡಿಸುತ್ತಿದೆ. ಈ ದುಷ್ಟ ಜಗತ್ತಿನಲ್ಲಿ ನಡೆಯುತ್ತಿರುವ ಕ್ರೌರ್ಯ ನೋಡಿ ಏನೇನೆಲ್ಲಾ ಬರೆಯುತ್ತಿದ್ದರೋ, ಹೇಗೆಲ್ಲಾ ಧೈರ್ಯ ತುಂಬುತ್ತಿದ್ದರೋ. ತೂಕಡಿಸುವವರು ಎಚ್ಚರಗೊಳ್ಳುವಂತೆ ಮಾಡುತ್ತಿದ್ದರೋ.

ಇದುವರೆಗೂ ಲಂಕೇಶರನ್ನು ಓದದವರು ಒಮ್ಮೆ ಓದಲಿ, ಮುಂದೆ ಬರೆಯಬೇಕೆಂದುಕೊಂಡವರು ವಾಸ್ತವವಾಗಿ ಬರೆಯುವುದು ಹೇಗೆಂಬುದನ್ನು ತಿಳಿಯಲಿ.

ಇಷ್ಟಕ್ಕೇ ಮುಗಿಯದು ಲಂಕೇಶರ ದೈತ್ಯಾಕಾರದ ಪ್ರತಿಭೆಯ ಅವಲೋಕನ. ಹೇಳಲು ಇನ್ನೂ ನೂರಾರು ವಿಷಯಗಳಿವೆ. ಆದರೆ ನನಗೆ ದಕ್ಕಿರುವುದು ಇಷ್ಟು. ಅವರು ನಮ್ಮನ್ನು ಪೊರೆದ ರೀತಿ, ಎಚ್ಚರಗೊಳಿಸಿದ ವೇಳೆ, ತಿದ್ದಿದ ಪರಿ... ಒಂದು ತಂದೆ, ಗೆಳೆಯ, ಅಧ್ಯಾಪಕ, ಪ್ರೇಮಿ, ಎಲ್ಲಾ ಪಾತ್ರವನ್ನೂ ಜವಾಬ್ದಾರಿಯಿಂದ ನಿರ್ವಹಿಸಿ ಹೆಮ್ಮೆಯಿಂದ ನಿರ್ಗಮಿಸಿದರು.

ನಿಮ್ಮ ಹುಟ್ಟಿದ ದಿನಕ್ಕೆ, ಈಗ ನಾನೂ ಕೂಡ, ನಾನೂ ಗೌರಿ ಆದ್ದರಿಂದ ಪ್ರೀತಿಯಿಂದ ಮಿಯಾವ್.

ಒಂದು ವಿಧದಲ್ಲಿ ದಂತಕಥೆಯಾಗಿದ್ದ ಲಂಕೇಶರನ್ನು ನೆನೆದರೆ ಅವರ ಜೀವಿತ ಕಾಲದಲ್ಲೇ ನಾನೂ ಇದ್ದೆನಾ ಎಂದು ರೋಮಾಂಚನಗೊಳ್ಳುವೆ. ಬಹುಶಃ ಈಗಿನ ಜನಾಂಗ ಅದರ ರೋಚಕತೆಯನ್ನನುಭವಿಸದೆ ಬಹಳ ನಷ್ಟವನ್ನುಭವಿಸಿದ್ದಾರೆ. ಬದುಕಿದ್ದಾಗ ದಂತಕಥೆಯಾಗಿದ್ದ ಲಂಕೇಶರು ಈಗ ಪ್ರತಿಪುಟದಲ್ಲೂ, ಒಂದೊಂದು ಓದಿನಲ್ಲೂ ಜೀವಂತವಿದ್ದಾರೆ. ಮನೆಯ ಎಲ್ಲಾ ಕೋಣೆಗಳಲ್ಲೂ ಒಂದೊಂದು ಅವರ ಪುಸ್ತಕವನ್ನಿಟ್ಟು ಐದು ನಿಮಿಷ ಸಮಯ ಸಿಕ್ಕಿದರೂ ಸಾಕು, ನಾಲ್ಕು ಹಾಳೆ ಓದಿದರೂ ಸಾಕು ಅಲ್ಲೇನೋ ತಿಳುವಳಿಕೆ, ಒಂದು ಸಮಾಧಾನ ಸಿಕ್ಕಿರುತ್ತದೆ. ಯಾವ ಲೇಖಕ ಎಲ್ಲಾ ರಂಗದಲ್ಲೂ ಕೈ ಆಡಿಸಿದ್ದಾರೆ? ಬರೆದ ಒಂದೊಂದು ಪದವೂ ಪ್ರಾಮಾಣಿಕವಾಗಿ ಬರೆದದ್ದರಿಂದಲೇ, ಆತಂಕವಾದಾಗ ಈಗಲೂ ದಿನಕ್ಕೊಮ್ಮೆ ಯಾದರೂ ಲಂಕೇಶ್ ಕೈಗೆ ಬರಲೇಬೇಕು.

ಮಾರ್ಚ್ ಎಂಟು, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಲಂಕೇಶ್ ಅವರ ಹುಟ್ಟಿದ ದಿನ ಒಂದೇ ಆದದ್ದು ಕಾಕತಾಳೀಯವೇ ಇರಬಹುದು. ಆದರೆ ಒಂದಕ್ಕೊಂದು ಪೂರಕವಾಗಿ ಬೆಸೆದಿದೆ. ಮಹಿಳೆಯರ ಶಕ್ತಿಯ ಬಗ್ಗೆ ಅವರಿಗಿದ್ದ ನಂಬಿಕೆಯನ್ನು ಯಾವ ಮಹಿಳೆಯೂ ಹುಸಿಗೊಳಿಸಲಿಲ್ಲ.

ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಮೇಲೆ ಯಾವ ಮಹಿಳೆಯೂ ಬೆನ್ನು ತಿರುಗಿಸಿ ಹೋಗಿದ್ದಿಲ್ಲ. ಮಹಿಳೆಯರನ್ನು ಹುರುಪು ಗೊಳಿಸಿದ ರೀತಿಯಿಂದ ಎಲ್ಲಾ ಮಹಿಳೆಯರು ಲಂಕೇಶ್ ಪತ್ರಿಕೆ ಎಂಬ ನಿರಂತರ ಇಪ್ಪತ್ತೈದು ವರ್ಷಗಳ ಕಾಲ ನಡೆದ ಜಾತ್ರೆಯಲ್ಲಿ ಅತೀ ಉತ್ಸಾಹದಿಂದ ಪಾಲ್ಗೊಂಡರು. ಅದರಲ್ಲೂ ಮುಸ್ಲಿಂ ಮಹಿಳೆ ಎಂಬ ಕಾರಣಕ್ಕೆ ಲಂಕೇಶ್ ಅವರ ವಿಶೇಷ ಪ್ರೀತಿಗೆ ಕಾರಣರಾಗಿ ಎಷ್ಟೆಲ್ಲಾ ಅದ್ಭುತ ಕಥೆಗಳನ್ನು ಬರೆದ ಸಾರಾ ಅಬೂಬಕ್ಕರ್ ಅವರನ್ನು ಯಾವ ಓದುಗರೂ ಮರೆಯಲು ಸಾಧ್ಯವಿಲ್ಲ. ಅವರ ಧರ್ಮದವರಿಂದಲೇ ಬಹಿಷ್ಕಾರದ ಬೆದರಿಕೆ, ನಿರಂತರ ಅವಹೇಳನಕಾರಿ ಮಾತುಗಳು ಬಂದಾಗಲೂ ಈಗಲೂ ಗಟ್ಟಿಯಾಗಿ ತನ್ನ ನಿಲುವನ್ನು ಪ್ರಕಟಿಸುತ್ತಿದ್ದಾರೆ.

ನಾವೆಲ್ಲ ಹಿಂದೆ ಸಾಮಾಜಿಕ, ಪ್ರಣಯ, ಪತ್ತೇದಾರಿ ಕಾದಂಬರಿಗಳಲ್ಲೇ ಮುಳುಗೇಳುತ್ತಿದ್ದ ಸಮಯದಲ್ಲಿ ಮುಸ್ಲಿಂ ಸಮುದಾಯದ ಕಥೆ ಮತ್ತು ಅವರಲ್ಲಿರುವ ನಾನಾ ತರಹದ, ನಮಗೆ ಕಲ್ಪಿಸಿಕೊಳ್ಳಲೂ ಸಾಧ್ಯವಿರದ ಪ್ರಪಂಚಕ್ಕೆ ಎಳೆದೊಯ್ದರು. ಆ ಮೂಲಕ ಆ ಧರ್ಮದವರ ಬಗ್ಗೆ ಒಂದೇ ಅಭಿಪ್ರಾಯ ಹೊಂದಿ ಅಸಡ್ಡೆ ಬೆಳೆಸಿಕೊಂಡಿದ್ದ ನಮ್ಮನ್ನೆಲ್ಲ ಬದಲಿಸಿದ್ದು ಅವರ ಕಥೆಗಳು. ಈಗಲೂ ಸಾರಾ ಅವರೆಂದರೆ ಒಂದು ಹೆಮ್ಮೆ ಮತ್ತು ಲಂಕೇಶರು ಒಂದು ತಾಯಿಹೃದಯದವರು.

**– ಶ್ರೀಮತಿ ರಾಜೇಶ್ವರಿ ಬೋಗಯ್ಯ.**

# ಆರೋಗ್ಯ ವಿಮೆ ಆಯ್ಕೆ ಹೇಗೆ?




**ಆರೋಗ್ಯ ವಿಮಾ ನೀತಿ ಕೆಲವು ರೀತಿ ಮತ್ತು ರಿವಾಜುಗಳನ್ನು ಹೊಂದಿರುತ್ತವೆ. ಯಾವುದನ್ನು ಒಳಗೊಳ್ಳುತ್ತದೆ, ಯಾವೆಲ್ಲವೂ ಒಳಗೊಳ್ಳುವುದಿಲ್ಲ ಎಂಬುದನ್ನು ವಿವರವಾಗಿ ಹೇಳಿರುತ್ತವೆ. ಈ ನಿಯಮಾವಳಿಗಳಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಎಂದರೆ, ಕಾಲಾವಧಿ, ಆಸ್ಪತ್ರೆ ಕೊಠಡಿಗಳ ಬಾಡಿಗೆ ವ್ಯಾಪ್ತಿ, ಅಸ್ತಿತ್ವದಲ್ಲಿರುವ ಕಾಯಿಲೆಗಳು.. ಇತ್ಯಾದಿ. ಹೀಗೆ ಎಲ್ಲ ಷರತ್ತು – ಮಿತಿಗಳನ್ನು ಜಾಲಾಡಬೇಕು. ಇವೆಲ್ಲವೂ ಒಪ್ಪಿತವಾದರೆ ಮಾತ್ರ ವಿಮೆ ಯೋಜನೆ ಪಡೆದುಕೊಳ್ಳಬೇಕು. ವಿಮೆಯನ್ನು ಹೊಂದುವಾಗ ನಿಯಮಾವಳಿಗಳ ಬಗ್ಗೆ ತಿಳಿದಿಲ್ಲವಾದಲ್ಲಿ ನಿಮಗೇ ಕಷ್ಟವಾಗುತ್ತದೆ. ನಿಮ್ಮ ಅಗತ್ಯ ವಿಷಯಗಳನ್ನು ಒಳಗೊಳ್ಳದೇ ಇರುವ ಅಂಶಗಳನ್ನಾದರೂ ಗಮನಿಸಬೇಕಾಗುತ್ತದೆ.**

ಇಡೀ ಜಗತ್ತೇ ಸಂಕಷ್ಟಕ್ಕೀಡಾಗಿರುವ ಕಾಲಘಟ್ಟದಲ್ಲಿ ಇಂದು ನಾವಿದ್ದೇವೆ. ಹಿಂದೆಂದೂ ಯಾರೂ ಕೇಳದ, ಕನಿಷ್ಠ ಔಷಧವೂ ಇಲ್ಲದ ರೋಗವೊಂದಕ್ಕೆ ತುತ್ತಾಗುತ್ತಿದ್ದೇವೆ. ಇತ್ತೀಚೆಗೆ ಅಪ್ಪಳಿಸಿದ ಕೊರೊನಾ ವೈರಸ್ ಎಲ್ಲರಲ್ಲಿ ಭೀತಿ ಹುಟ್ಟಿಸಿದೆ. ಅಷ್ಟೇ ಏಕೆ ಇಡೀ ವಿಶ್ವವನ್ನೇ ಅಲುಗಾಡಿಸಿದೆ.

ವಿಶ್ವ ಆರೋಗ್ಯ ಸಂಸ್ಥೆಯೂ ಇದನ್ನು ಜಾಗತಿಕ ಪಿಡುಗು ಎಂದು ಘೋಷಿಸಿದೆ. ಇದಕ್ಕೂ ಮೊದಲು ಸಾರ್ಸ್, ನಿಫಾ, ಜಿಕಾ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಇದ್ದವು. ಅವು ಜನರಲ್ಲಿ ಭೀತಿ ಹುಟ್ಟಿಸುವ, ವ್ಯಾಪಿಸುವ ಮೊದಲೇ ಚಿಕಿತ್ಸೆ ಮೂಲಕ ನಿವಾರಿಸಲಾಯಿತು. ಇಂತಹ ಸಾಂಕ್ರಾಮಿಕ ರೋಗಗಳು ಬರುತ್ತವೆ ಮತ್ತು ಹೋಗುತ್ತವೆ. ಆದರೆ, ಇವುಗಳನ್ನು ಕೊನೆಗಾಣಿಸಲು ನಾವು ಆರ್ಥಿಕವಾಗಿ ಸದೃಢವಾಗಿದ್ದೇವೆಯೇ ಎಂಬುದು ಮುಖ್ಯವಾಗುತ್ತದೆ. ಸಾಮಾನ್ಯ ಆರೋಗ್ಯ ರಕ್ಷಣೆ ನೀತಿಯು ಕೋವಿಡ್ ಸೇರಿದಂತೆ ಸಾಂಕ್ರಮಿಕ ರೋಗಗಳನ್ನು ಒಳಗೊಂಡಿರುತ್ತದೆ.

ಉತ್ತಮ ಚಿಕಿತ್ಸೆ ಪಡೆಯಲು ಮತ್ತು ಚಿಕಿತ್ಸೆಯ ವೈದ್ಯಕೀಯ ವೆಚ್ಚವನ್ನು ಆರೋಗ್ಯ ವಿಮೆಯು ಭರಿಸುತ್ತದೆ. ಪ್ರಸಕ್ತ ದಿನಮಾನಗಳಲ್ಲಿ ವೈದ್ಯಕೀಯ ವೆಚ್ಚ– ದರ ಹೆಚ್ಚುತ್ತಿರುವ ಸಂದರ್ಭದಲ್ಲಿ ಆರೋಗ್ಯ ವಿಮೆ ಇಲ್ಲದೇ ಆಸ್ಪತ್ರೆಗೆ ದಾಖಲಾಗುವುದು ಕಷ್ಟ. ಆಸ್ಪತ್ರೆ ವೆಚ್ಚಗಳು ನಮ್ಮ ಉಳಿತಾಯ ಹಣವನ್ನು ಮತ್ತು ಜೇಬನ್ನು ಒಮ್ಮೆಲೆ ಖಾಲಿ ಮಾಡಿ ಬಿಡುತ್ತದೆ. ಇವೆಲ್ಲ ಖರ್ಚು– ವೆಚ್ಚ– ಆತಂಕಗಳ ಅರಿವಿದ್ದರೂ ನಮ್ಮಲ್ಲಿ ಆರೋಗ್ಯದ ಅಗತ್ಯಗಳಿಗೆ ಸರಿಹೊಂದುವ ವಿಮೆಯನ್ನು ಹೊಂದಿರುವವರು ಬಹಳ ಕಡಿಮೆ. ವಿಮೆಯು ಎಂತಹ ವಿಷಮ ಸ್ಥಿತಿಯಲ್ಲೂ ಧೈರ್ಯವನ್ನು ನೀಡುತ್ತದೆ. ಅಲ್ಲದೆ, ಸದಾ ಬೆನ್ನಿಗೆ ನಿಂತಿರುತ್ತದೆ. ಆರೋಗ್ಯ ವಿಮೆಯು ಕೊರೊನಾ ವೈರಸ್‌ನಂತಹ ಪಿಡುಗುಗಳಿಂದ ನಮ್ಮನ್ನು ರಕ್ಷಿಸುತ್ತದೆ. ವೈದ್ಯಕೀಯ ವೆಚ್ಚಗಳ ಬಗ್ಗೆ ವಿಮೆ ಇದ್ದರೆ ಸಾಕು. ಉಳಿದ ಯಾವುದೇ ಚಿಂತೆಯನ್ನೂ ಮಾಡಬೇಕಾಗಿಲ್ಲ. ವಿಮೆಯು ಮನಸ್ಸಿಗೂ ನಿರಾಳತೆಯನ್ನು ನೀಡುತ್ತದೆ. ಆದರೆ, ನೀವು ಆರೋಗ್ಯ ವಿಮೆಯನ್ನು ಹೊಂದುವುದಕ್ಕೂ ಮುನ್ನ ಈ ಬಹು ಮುಖ್ಯ ಅಂಶಗಳನ್ನು ಬಗ್ಗೆ ಯೋಚಿಸಬೇಕು.

ಎಲ್ಲದಕ್ಕೂ ಅನ್ವಯ ಆಗುವ ವಿಮೆ ಆಯ್ಕೆ ಮಾಡುವುದು: ನಮ್ಮ ದೇಹಾರೋಗ್ಯ ಸ್ಥಿತಿಯನ್ನು ಆಧರಿಸಿ ಮತ್ತು ಮುಂದಾಲೋಚನೆಯಿಂದ ಹೊಂದಿಕೆಯಾಗುವ ಆರೋಗ್ಯ ವಿಮೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ನಮ್ಮ ವಿಮಾ ಕವಚವು ಎದುರಾಗುವ ಸಂಕಷ್ಟದಿಂದ ನಮ್ಮನ್ನು ರಕ್ಷಿಸುತ್ತದೆ. ನಿಮ್ಮ ಬಳಿ – ಜಿಎಂಸಿ' ವಿಮೆ (ಗ್ರೂಪ್ ಮೆಡಿಕಲ್ ಕವರ್) ಇದ್ದರೆ ಸಾಕೇ. ಯಾರೊಬ್ಬರ ಅವಲಂಬನೆ ಬೇಡವೆ. ಏನು ಮಾಡುವುದು. ವೈಯಕ್ತಿಕ ವಿಮೆಯನ್ನು ಖರೀದಿಸಲೇ. ಸೂಪರ್ ಟಾಪ್ ಅಪ್ ಅನ್ನು ಹೊಂದುವ ಮೂಲಕ ವಿಮೆ ವ್ಯಾಪ್ತಿಯನ್ನು ಹೆಚ್ಚಿಸಬೇಕೆ. ಇಂತಹ ಪ್ರಶ್ನೆಗಳನ್ನು ನಿಮ್ಮಲ್ಲಿ ಕೇಳಿಕೊಂಡರೆ ನಿಮಗೇನು ಬೇಕು ಎಂಬುದು ನಿಮಗೇ ಗೊತ್ತಾಗುತ್ತದೆ. ಈ ಆಲೋಚನೆಯು ನಿಮಗೆ ಹೊಂದುವಂತಹ ಟಾಪ್ ಅಪ್ ನೀತಿಯನ್ನು ಆಯ್ಕೆ ಮಾಡಲು ಸಹಕರಿಸುತ್ತದೆ. ಆಗಲೂ ನಿಮ್ಮಲ್ಲಿ ಇನ್ನೂ ದ್ವಂದ್ವ ಅನುಮಾನಗಳು ಇದ್ದಲ್ಲಿ ವಿಮಾ ಕಂಪೆನಿಯನ್ನು ಸಂಪರ್ಕಿಸಬಹುದು. ಅವರು ನಿಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಸರಿಹೊಂದುವ ಆರೋಗ್ಯ ವಿಮೆಯನ್ನು ಸೂಚಿಸುತ್ತಾರೆ.

### ಹಿನ್ನೆಲೆಯ ಪರಿಶೀಲನೆ

ವಿಮೆಯನ್ನು ಪಡೆದುಕೊಳ್ಳುವ ಮುಂಚೆ ವಿಮಾ ಕಂಪನಿಯ ಹಿನ್ನೆಲೆಯನ್ನು ಪರಿಶೀಲಿಸಿರಬೇಕು. ಕಂಪನಿಯ ಕೊಡುಗೆಗಳು ಮತ್ತು ಅದು ಹೊಂದಿರುವ ಆಸ್ಪತ್ರೆ ಜಾಲವು ಕಂಪನಿಯ ಹಿನ್ನೆಲೆಯನ್ನು ಅರ್ಥೈಸುತ್ತದೆ. ವಿವಿಧ ಕಂಪನಿಗಳು, ಅವುಗಳ ಕೊಡುಗೆಗಳು, ಸೇವೆ, ಮಾರುಕಟ್ಟೆಯ ಸ್ಥಿತಿ ಮತ್ತು ಅವು ಹೊಂದಿರುವ ನೀತಿಗಳ ಬಗ್ಗೆ ವಿಸ್ತೃತವಾಗಿ ಮಾಹಿತಿ ಪಡೆಯಬೇಕು. ಆರೋಗ್ಯ ವಿಮೆಯನ್ನು

ಹೊಂದುವಾಗ ದರವನ್ನು ಮಾತ್ರವೇ ಪ್ರಧಾನ ವಿಷಯವಾಗಿ ಪರಿಗಣಿಸಬಾರದು.

### ನಿಯಮಾವಳಿ ಮತ್ತು ಷರತ್ತು ತಿಳಿದುಕೊಳ್ಳಿ

ಆರೋಗ್ಯ ವಿಮಾ ನೀತಿ ಕೆಲವು ರೀತಿ ಮತ್ತು ರಿವಾಜುಗಳನ್ನು ಹೊಂದಿರುತ್ತವೆ. ಯಾವುದನ್ನು ಒಳಗೊಳ್ಳುತ್ತದೆ, ಯಾವೆಲ್ಲವೂ ಒಳಗೊಳ್ಳುವುದಿಲ್ಲ ಎಂಬುದನ್ನು ವಿವರವಾಗಿ ಹೇಳಿರುತ್ತವೆ. ಈ ನಿಯಮಾವಳಿಗಳಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಎಂದರೆ, ಕಾಲಾವಧಿ, ಆಸ್ಪತ್ರೆ ಕೊಠಡಿಗಳ ಬಾಡಿಗೆ ವ್ಯಾಪ್ತಿ, ಅಸ್ತಿತ್ವದಲ್ಲಿರುವ ಕಾಯಿಲೆಗಳು.. ಇತ್ಯಾದಿ. ಹೀಗೆ ಎಲ್ಲ ಷರತ್ತು– ಮಿತಿಗಳನ್ನು ಜಾಲಾಡಬೇಕು. ಇವೆಲ್ಲವೂ ಒಪ್ಪಿತವಾದರೆ ಮಾತ್ರ ವಿಮೆ ಯೋಜನೆ ಪಡೆದುಕೊಳ್ಳಬೇಕು. ವಿಮೆಯನ್ನು ಹೊಂದುವಾಗ ನಿಯಮಾವಳಿಗಳ ಬಗ್ಗೆ ತಿಳಿದಿಲ್ಲವಾದಲ್ಲಿ ನಿಮಗೇ ಕಷ್ಟವಾಗುತ್ತದೆ. ನಿಮ್ಮ ಅಗತ್ಯ ವಿಷಯಗಳನ್ನು ಒಳಗೊಳ್ಳದೇ ಇರುವ ಅಂಶಗಳನ್ನಾದರೂ ಗಮನಿಸಬೇಕಾಗುತ್ತದೆ.

### ಸಿಗುವ ಕೆಲವು ಪ್ರಯೋಜನಗಳು

**ಉಚಿತ ಆರೋಗ್ಯ ತಪಾಸಣೆ :** ಕೆಲವು ವಿಮಾದಾರರು ವರ್ಷದ ಕೊನೆಯಲ್ಲಿ ಉಚಿತ ತಪಾಸಣೆಯನ್ನು ಆಯೋಜಿಸುತ್ತಾರೆ. ಇದು ನಿಮ್ಮ ಆರೋಗ್ಯದ ಮೇಲೆ ನಿಗಾ ಇಡಲು ಸಹಾಯ ಮಾಡುತ್ತದೆ. ಅಷ್ಟೇ ಅಲ್ಲ ನಮ್ಮ ಆರೋಗ್ಯ ವ್ಯಾಪ್ತಿಯನ್ನು ಅಂದಾಜಿಸಲು ಸಹಕರಿಸುತ್ತದೆ.

**ಬೋನಸ್ :** ಹಿಂದಿನ ಅವಧಿಯ ವಿಮೆಯನ್ನು ಪಡೆದುಕೊಳ್ಳಲು ಹಕ್ಕು ಮಂಡಿಸದಿದ್ದರೆ ವಿಮಾ ನವೀಕರಣ ಮಾಡುವಾಗ ಬೋನಸ್ ನೀಡುತ್ತಾರೆ. ಈ ವಿವರಗಳ ಕುರಿತು ವಿಮಾ ಪತ್ರದಲ್ಲಿಯೇ ತಿಳಿಸಿರುತ್ತಾರೆ. ಕೆಲವು ವಿಮಾ ಕಂಪನಿಗಳಂತೂ ಬೋನಸ್ ಅನ್ನು ಹೆಚ್ಚಿಸುವ ಅಥವಾ ಪ್ರೀಮಿಯಂ ಹಣವನ್ನು ಕಡಿಮೆಗೊಳಿಸುವ ಕೊಡುಗೆಗಳನ್ನು ಗ್ರಾಹಕರಿಗೆ ನೀಡಿರುತ್ತವೆ.

**ಕಾಯಿಲೆಗಳಿಗೆ ರಕ್ಷಣೆ :** ವಿಮೆ ಮಾಡಿಸುವ ಮುಂಚೆಯೇ ಅಸ್ತಿತ್ವದಲ್ಲಿದ್ದ ಕಾಯಿಲೆಗಳಿಗೂ ರಕ್ಷಣೆಯ ಅಭಯವನ್ನು ವಿಮಾ ಕಂಪನಿಗಳು ನೀಡಿರುತ್ತವೆ. ಈ ಕಾಯಿಲೆಗಳ ಕುರಿತು ವಿಮಾದಾರರ ಘೋಷಣೆಯ ಆಧಾರದ ಮೇಲೆ ಸಂಬಂಧಿಸಿದ ಚಿಕಿತ್ಸೆಯ ವೆಚ್ಚವನ್ನು ಭರಿಸಲಾಗುತ್ತದೆ. ಇದರ ವ್ಯಾಪ್ತಿಯನ್ನೂ ನಿರ್ಧರಿಸಲಾಗಿರುತ್ತದೆ.

ಆರೋಗ್ಯ ಸಂಬಂಧಿತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವಂತೆಯೇ ಸಂಕಷ್ಟ ಸಮಯದಲ್ಲಿ ಪರಿಹಾರೋಪಾಯ ಮಾರ್ಗಗಳನ್ನು ಈಗಾಗಲೇ ಗುರುತು ಮಾಡಿ ಇಟ್ಟುಕೊಂಡಿರಬಹುದು. ಆದರೆ, ಆರೋಗ್ಯ ವಿಮೆ ನೀಡುವ ಬೆಂಬಲ ಮತ್ತು ಕಾಳಜಿ ಇನ್ನಾವುದೇ ಪರಿಹಾರೋಪಾಯ ಭರಿಸಲಾಗುವುದಿಲ್ಲ. ವಿಮೆಯನ್ನು ಪಡೆಯುವಾಗ ಸಲಹೆ ಪಡೆದು ಉತ್ತಮವಾದುದನ್ನೇ ಆಯ್ದುಕೊಳ್ಳಬೇಕು. ಏಕೆಂದರೆ ಆರೋಗ್ಯವು ಅಪಾಯಕ್ಕೆ ಸಿಲುಕಿದಾಗ ನೆರವಾಗುವುದು ವಿಮೆಯೇ ಆಗಿರುತ್ತದೆ.

# ಲಾಕ್‌ಡೌನ್ ವೇಳೆ ರೂ.2.8 ಲಕ್ಷ ಕೋಟಿ ಹೆಚ್ಚಾದ ಬ್ಯಾಂಕ್ ಠೇವಣಿ



**ಮುಂಬೈ :** ಕೊರೊನಾ ಹಿನ್ನೆಲೆ ಜಾರಿಗೆ ತಂದಿರೋ ಲಾಕ್‌ಡೌನ್‌ನಿಂದಾಗಿ ಒಬ್ಬಬ್ಬರಿಗೆ ಒಂದೊಂದು ಸಮಸ್ಯೆ ಆದರೆ, ಪರೋಕ್ಷವಾಗಿ ಕೆಲವು ಕ್ಷೇತ್ರಗಳಿಗೆ ಲಾಭವಾಗಿದ್ದೂ ಇದೆ. ಉದಾಹರಣೆಗೆ ಹೇಳೋದಾದ್ರೆ ಔಷಧ ಕ್ಷೇತ್ರ, ಮೆಡಿಕಲ್ ಇಕ್ವಿಪ್‌ಮೆಂಟ್ ತಯಾರಿಕಾ ಕ್ಷೇತ್ರ, ಓಟಿಟಿ ಪ್ಲಾಟ್‌ಫಾರ್ಮ್ ಹೀಗೆ. ಇನ್ನೊಂದು ಕ್ಷೇತ್ರವಾದ ಬ್ಯಾಂಕಿಂಗ್‌ಗೆ ಸ್ವಲ್ಪ ಲಾಭ, ಸ್ವಲ್ಪ ನಷ್ಟವಾದ ಬಗೆ ಇಂದು ವಿವರ ಲಭ್ಯವಾಗಿದೆ.

ಹೌದು, ಲಾಕ್‌ಡೌನ್ ವೇಳೆ ದೇಶದಲ್ಲಿ ಬ್ಯಾಂಕ್ ಠೇವಣಿ ರೂ.2.8 ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿದೆ ಅಂತಾ ರಿಸರ್ವ್ ಬ್ಯಾಂಕ್ ತಿಳಿಸಿದೆ. ಆದ್ರೆ, ಈ ಅವಧಿಯಲ್ಲಿ ಬ್ಯಾಂಕ್ ಸಾಲ 1.2 ಲಕ್ಷ ಕೋಟಿ ರೂಪಾಯಿಯಷ್ಟು ಇಳಿದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಈ ಬಗ್ಗೆ ವರದಿ ಪ್ರಕಟಿಸಿರುವ ರಿಸರ್ವ್ ಬ್ಯಾಂಕ್, ಬ್ಯಾಂಕ್‌ಗಳಿಗೆ ಸುಮಾರು ರೂ.4 ಲಕ್ಷ ಕೋಟಿ ಹಣ ಸೇರಿರುವ ಕಾರಣ ಬ್ಯಾಂಕ್‌ಗಳ ಹೂಡಿಕೆ ಹೆಚ್ಚಿದೆ ಎಂದಿದೆ. ಲಾಕ್‌ಡೌನ್ ವೇಳೆ ಮಾರ್ಚ್ 27ರಂದು ಬ್ಯಾಂಕ್‌ಗಳ ಠೇವಣಿ ಸುಮಾರು ರೂ.135.7 ಲಕ್ಷ ಕೋಟಿಯಿದ್ದರೆ, ಏಪ್ರಿಲ್ 10ರ ವೇಳೆಗೆ ರೂ.137.1 ಲಕ್ಷ ಕೋಟಿ ಆಗಿತ್ತು. ಇದೀಗ ಮೇ ವೇಳೆಗೆ ರೂ.138.5 ಲಕ್ಷ ಕೋಟಿ ಜಮೆಯಾಗಿದೆ.

ಫಿಕ್ಸ್‌ಡ್ ಡಿಪಾಸಿಟ್ ಹೆಚ್ಚಾಗಿರುವುದರ ಪರಿಣಾಮ ಕೇವಲ ಆರು ವಾರಗಳಲ್ಲಿ ಶೇಕಡಾ 2ರಷ್ಟು ಹೂಡಿಕೆ ಜಾಸ್ತಿಯಾಗಿದೆ. ಆದರೆ, ಬ್ಯಾಂಕ್ ಸಾಲದಲ್ಲಿ ಮಾರ್ಚ್ 27ರ ವೇಳೇಗೆ ರೂ. 103.7ಲಕ್ಷ ಕೋಟಿಯಿದ್ದರೆ, ಮೇ8ರ ವೇಳೆಗೆ ರೂ. 102.5 ಲಕ್ಷ ಕೋಟಿಯಾಗಿದೆ. ಅಂದರೆ ಸಾಲ ಪಡೆಯುವವರ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಸಾಲ ಪಡೆಯುವ ಪ್ರಮಾಣ ಕೂಡ ರೂ. 1.2 ಲಕ್ಷ ಕೋಟಿಯಷ್ಟು ಇಳಿಕೆಯಾಗಿದೆ.

# ಕೊರೊನಾ ಸಂಕಷ್ಟಕ್ಕೆ ನೈಸರ್ಗಿಕ ಪರಿಹಾರ : ಸುಭಾಷ್ ಪಾಳೇಕರ್



**ಕೊರೊನಾ ವೈರಸ್ ಸೋಂಕಿನ ಕಾರಣ ಒಂದೂವರೆ ತಿಂಗಳಿನಿಂದ ಲಾಕ್ ಡೌನ್ ಆಗಿರುವ ಹಿನ್ನೆಲೆಯಲ್ಲಿ ಎಲ್ಲ ಕ್ಷೇತ್ರಗಳು ಸೊರಗಿವೆ. ಅಲ್ಪ ಸ್ವಲ್ಪ ಉಸಿರಾಡಲು ಅವಕಾಶ ಸಿಕ್ಕಿದ್ದ ಕೃಷಿ ಕ್ಷೇತ್ರದ ಮೇಲೂ ಬಹುದೊಡ್ಡ ಪೆಟ್ಟು ಬಿದ್ದಿದೆ. ಆ ಬಗ್ಗೆ ಚರ್ಚಿಸಿ ಪರಿಹಾರ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಮೇ 7ರಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರೈತ ಸಂಘಟನೆಗಳ ಮುಖಂಡರುಗಳ ಸಭೆ ಕರೆದಿದ್ದರು. ಅನೇಕ ಕೃಷಿ ಚಿಂತಕರು, ರೈತ ಮುಖಂಡರು ಮುಖ್ಯಮಂತ್ರಿಗಳ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಹರಿಕಾರ ಸುಭಾಷ್ ಪಾಳೇಕರ್ ಖಾಸಗಿ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದ ಸಾರಾಂಶ ಸರ್ಕಾರದ ಗಮನಕ್ಕೆ ಮತ್ತು ನಮ್ಮ ಓದುಗರಿಗಾಗಿ ಇಲ್ಲಿ ನೀಡಲಾಗಿದೆ.**

ಸುಭಾಷ್ ಪಾಳೇಕರ್ ಮಾತು... ಇಲ್ಲಿ ಎರಡು ವಿಷಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ಕೊರೊನಾ ಸೋಂಕನ್ನು ಎದುರಿಸುವುದು, ಮತ್ತೊಂದು ರೈತರ ಸಮಸ್ಯೆ. ಕೊರೊನಾ ವಿಚಾರ ಮಾತನಾಡುವುದಾದರೆ, ಈ ಬಿಕ್ಕಟ್ಟು ತಕ್ಷಣಕ್ಕೆ ಮುಗಿಯುವಂಥದ್ದಲ್ಲ. ಇದು ಇನ್ನೂ ಮುಂದುವರೆಯುತ್ತದೆ. ಇದಕ್ಕೆ ಔಷಧಿ ಇಲ್ಲ. ಒಂದೇ ಸಿದ್ದ ಔಷದ ಅಂದ್ರೆ resistance. ಜನರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಬೇಕು. ಜಗತ್ತಿನಾದ್ಯಂತ ಜನರಲ್ಲಿ ರೋಗ ನಿರೋಧಕ ಶಕ್ತಿ ಏಕೆ ಕಡಿಮೆ ಆಗಿದೆ ಎಂಬುದನ್ನು ನಾವು ಮೊದಲು ತಿಳಿಯಬೇಕು.

### ಬೆಳೆಗಾರ-ಗ್ರಾಹಕರ ಕೊಂಡಿಯಾಗಬೇಕಿದೆ ಸರ್ಕಾರ

ಎರಡನೆಯದಾಗಿ, ರೈತರು ಬೆಳೆದ ತರಕಾರಿಗಳಿಗೆ ಮಾರುಕಟ್ಟೆ ಇಲ್ಲದೆ ರಸ್ತೆಗೆ ಎಸೆಯುವುದರ ಬದಲು ಕತ್ತರಿಸಿ ಬಿಸಿಲಿನಲ್ಲಿ ಒಣಗಿಸಿ ಮರು ಬಳಸಬಹುದಾಗಿದೆ. ಪುಡಿ ಮಾಡಿಟ್ಟುಕೊಳ್ಳಬಹುದು. ಹಿಂದೆ ಇಂಥವೆಲ್ಲಾ ಪ್ರಯೋಗಗಳನ್ನು ನಮ್ಮ ಜನರೇ ಮಾಡುತ್ತಿದ್ದ ಉದಾಹರಣೆಗಳಿವೆ. ಸರ್ಕಾರಗಳು, ಬೆಳೆಗಾರ ಮತ್ತು ಗ್ರಾಹಕರ ನಡುವೆ ಕೊಂಡಿಯಾಗಿ ಕೆಲಸ ಮಾಡಬೇಕು. ಅದು ಸಾಧ್ಯ. ಬಹಳ ದೊಡ್ಡ infrastructure ಅನ್ನು ಸರ್ಕಾರಗಳು ಹೊಂದಿವೆ. ಹಳ್ಳಿಗಳಲ್ಲಿ ಬೆಳೆದ ಬೆಳೆಗಳನ್ನು ದಾಸ್ತಾನು ಕೇಂದ್ರಗಳಲ್ಲಿ ಶೇಖರಣೆ ಮಾಡಿ, ಅಲ್ಲಿಂದ ನಗರಗಳಿಗೆ ತಲುಪಿಸುವ ಮತ್ತು ಹಳ್ಳಿಯಿಂದ ದಿಲ್ಲಿಯವರೆಗೆ ಮನೆ ಮನೆಗೆ ಆಹಾರ ಉತ್ಪನ್ನಗಳನ್ನು ತಲುಪಿಸುವ ಕೆಲಸ ಆಗಬೇಕು. ಅದು ಆಗದೆ ಇರುವ ಕೆಲಸವೇನಲ್ಲ. ಈವರೆಗೆ ಸರ್ಕಾರಗಳು ಅಂಥ ಯೋಚನೆಯನ್ನು ಮಾಡಿಯೇ ಇಲ್ಲ. ಮುಂದಿನ ದಿನಗಳಲ್ಲಿ ಮಾಡಬಹುದಾ ನೋಡಬೇಕಿದೆ.



ಇಂಥ ವೈರಸ್ ಗಳೊಂದಿಗೆ ಸೆಣಸುವ ಶಕ್ತಿ ಬೆಳೆಸಿಕೊಳ್ಳಬೇಕು ಕೊರೊನಾ ಬಿಕ್ಕಟ್ಟು ಅಂದ್ರಲ್ಲಾ, ಆ ಬಗ್ಗೆ ಹೇಳ್ತೀನಿ ಕೇಳಿ. ಇದು ಆರಂಭ ಅಷ್ಟೇ. ಇಂಥ ವೈರಸ್ ಗಳು ಮುಂದೆ ಮುಂದೆ ಬರುತ್ತಲೇ ಇರುತ್ತವೆ. ಜನ ವೈರಸ್ ಸೆಣಸುವ ಶಕ್ತಿ ಬೆಳೆಸಿಕೊಳ್ಳಬೇಕು. ಅದಕ್ಕಾಗಿ ಉತ್ತಮ ಗುಣಮಟ್ಟದ, ವಿಷವಿಲ್ಲದ, ರಾಸಾಯನಿಕಗಳಿಲ್ಲದ ಆಹಾರ ಸೇವಿಸಬೇಕು.

### ಸರ್ಕಾರ ಏನು ಮಾಡಬೇಕು?

ಸರ್ಕಾರಗಳು ಕೃಷಿಯಲ್ಲಿ ರಾಸಾಯನಿಕಗಳ ಬಳಕೆ ನಿಷೇಧಿಸಬೇಕು. ಬೆಳೆ ನಿರ್ವಹಣೆಯ ನೈಸರ್ಗಿಕ ಮಾದರಿಗಳನ್ನು ಅಳವಡಿಸಿಕೊಳ್ಳುವಂತೆ ರೈತರನ್ನು ಪ್ರೋತ್ಸಾಹಿಸಬೇಕು.

### ಇಡೀ ಜಗತ್ತು “ವಿಷವಿಲ್ಲದ ಆಹಾರ”ದ ಬಗ್ಗೆ ಚಿಂತಿಸಬೇಕಿದೆ





ಕೃಷಿಯಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕ, ಶಿಲೀಂಧ್ರನಾಶಕ, ಕಳೆನಾಶಕಗಳನ್ನು ಬಳಸಲಾಗುತ್ತಿದೆ. ಇವುಗಳ ರೆಸಿಡ್ಯೂಸ್ ಆಹಾರದ ಮೂಲಕ ಮನುಷ್ಯರ ದೇಹ ಸೇರುತ್ತಿದೆ. ಆ ರಾಸಾಯನಿಕಗಳು ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ರೋಗ ನಿರೋಧಕ ಶಕ್ತಿಯನ್ನೂ ಕುಂದಿಸುತ್ತಿವೆ. ಹಾಗಾಗಿ ಈಗ ಎದುರಾಗಿರುವ ಕೊರೊನಾ ಬಿಕ್ಕಟ್ಟಿನಲ್ಲಿ ಇಡೀ ಜಗತ್ತು "ವಿಷವಿಲ್ಲದ ಆಹಾರ" ದ ಬಗ್ಗೆ ಚಿಂತಿಸಬೇಕಿದೆ. ಯಾವುದೇ ರಾಸಾಯನಿಕಗಳನ್ನು ಬಳಸದೆ ಬೆಳೆಯಲಾಗುವ ಆಹಾರದ ಬಗ್ಗೆ ಯೋಚಿಸಬೇಕಿದೆ. ಅದೊಂದೇ ಪರಿಹಾರ.

### ರೈತರು ಏನು ಮಾಡಬೇಕು?

ತತ್‌ಕ್ಷಣದಿಂದ ರೈತರು ಕೃಷಿಯಲ್ಲಿ ರಾಸಾಯನಿಕಗಳ ಬಳಕೆ ನಿಲ್ಲಿಸಬೇಕು. ನೈಸರ್ಗಿಕ ವಿಧಾನಗಳಿಂದಲೇ ಆಹಾರ ಉತ್ಪಾದನೆ ಮಾಡಬೇಕು. ಮೂಲದಲ್ಲೇ ಇದಕ್ಕೆ ಉತ್ತರ ಕಂಡುಕೊಳ್ಳಬೇಕು ಕೊರೋನಾ ಸಂಕಷ್ಟ? – ನಿಮಗೆ ಆಗಲೇ ಹೇಳಿದೆ. ಇದು ಈಗಲೇ ಮುಗಿಯುವುದೂ ಇಲ್ಲ ಮತ್ತು ಇಂಥ ಹೊಸ ಹೊಸ ವೈರಸ್ ಗಳು ಬರುತ್ತಲೇ ಇರುತ್ತವೆ. ಹಾಗಾಗಿ ಮೂಲದಲ್ಲೇ ಇದಕ್ಕೆ ಉತ್ತರ ಕಂಡುಕೊಳ್ಳಬೇಕು. ಆಹಾರ ಉತ್ಪಾದನೆ ವಿಷರಹಿತವಾಗಿರಬೇಕು. ರಾಸಾಯನಿಕಗಳಿಂದ ಮುಕ್ತವಾಗಿರಬೇಕು. ಜನರಲ್ಲಿ ರೆಸಿಸ್ಟೆನ್ಸ್, ರೋಗನಿರೋಧಕ ಶಕ್ತಿ ಹೆಚ್ಚಬೇಕು. ರೈತರು ರಾಸಾಯನಿಕಗಳನ್ನು ಬಳಸಿ ಉತ್ಪಾದನಾ ವೆಚ್ಚ ಹೆಚ್ಚು ಮಾಡಿಕೊಂಡು ಬೇಸ್ತುಬೀಳಬಾರದು.



ಬೆಳೆದ ಸೊಪ್ಪು, ತರಕಾರಿ ರಸ್ತೆಗೆ ಎಸೆಯುವ ಸನ್ನಿವೇಶ ಬಂದಲ್ಲಿ ಕತ್ತರಿಸಿ ಬಿಸಿಲಿನಲ್ಲಿ ಒಣಗಿಸಿ ಮರು ಬಳಸಬಹುದು. ಆ ಬಗ್ಗೆ ಸರಿಯಾದ ಮಾಹಿತಿ ಪಡೆದು ಸಂಸ್ಕರಿಸಿಕೊಳ್ಳಬಹುದು.

**– ಎಂ. ಮಹೇಶ್‌ಕುಮಾರ್**






# ಸಹಕಾರ 'ಅಸ್ಮಿತೆ' ಮತ್ತು 21ನೇ ಶತಮಾನದಲ್ಲಿ ಸಹಕಾರ ಸಂಘಗಳ 'ಅಸ್ತಿತ್ವ'

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು.

ಸಹಕಾರ ಚಳುವಳಿ ಭಾರತದಲ್ಲಿ ನೆಲೆಗೊಂಡು ನೂರ ಹದಿನೈದು ವರ್ಷಗಳಾಗಿವೆ. ಚಳುವಳಿ ಎದುರಿಸಿರುವ ಸವಾಲುಗಳು ಅನೇಕ. ಆದರೆ 1990ರ ದಶಕದಿಂದೀಚೆಗೆ ಎದುರಿಸುತ್ತಿರುವ ಸವಾಲು ಅತ್ಯಂತ ಮಹತ್ತರವಾದದು. ಭಾರತದ ಆರ್ಥಿಕ ಚಿಂತನೆಯ ದಿಕ್ಕು ಬದಲಾಗಿದೆ. ಸಹಕಾರದ ಚಳುವಳಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರದಲ್ಲಿ ಸರ್ಕಾರ ಮತ್ತು ಸಾರ್ವಜನಿಕ ವಲಯ ಸಹಕಾರ ವಲಯಕ್ಕೆ ಪೂರಕವಾಗಿ ನಿಂತಿದ್ದು ಅದರ ಬೆಳವಣಿಗೆಗೂ ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಭಾರತದಲ್ಲಿನ ಆರ್ಥಿಕ ನೀತಿ ಮಿಶ್ರ ಆರ್ಥಿಕ ನೀತಿಯಿಂದ ಹೊರಳಿ ಖಾಸಗೀ ವಲಯಕ್ಕೆ ಒತ್ತಾಸೆ ನಿಂತಾಗಿನಿಂದ ಸಹಕಾರ ವಲಯ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿದೆ. ಬದಲಾದ ಪರಿಸರಕ್ಕೆ ಸಜ್ಜುಗೊಳ್ಳದೇ ಇರುವುದೇ ಇದಕ್ಕೆ ಕಾರಣವಾಗಿದೆ. ವಿಶ್ವ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಭಾರತ ಒಂದು ದ್ವೀಪವಾಗಿ ಉಳಿಯದೇ ತಾನೂ 'ಉದಾರೀಕರಣ, ಖಾಸಗೀಕರಣ, ಜಾಗತೀಕರಣ'ಕ್ಕೆ ವಡ್ಡಿಕೊಳ್ಳಲೇ ಬೇಕಾದ ಸ್ಥಿತಿ ಅನಿವಾರ್ಯವೂ ಅವಶ್ಯಕತೆಯೂ ಆಗಿರುತ್ತದೆ. ಇದರ ನೇರ ಪರಿಣಾಮ ಸಹಕಾರ ವಲಯದ ಮೇಲಾಗಿದ್ದು, ತನ್ನ ಅಸ್ತಿತ್ವದ ಅವಶ್ಯಕತೆಯ ಮೇಲೆಯೇ ದುಷ್ಪರಿಣಾಮ ಬೀರಿದೆ.



ಈ ಮೇಲಿನ ಪರಿಸ್ಥಿತಿಯಲ್ಲಿ ಭಾರತದ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳ ಮೇಲೆ ಆಗಿರುವ ಋಣಾತ್ಮಕ ಪರಿಣಾಮಗಳ ಅಧ್ಯಯನ ಅಗತ್ಯ. ಒಂದು ಸಮೀಕ್ಷೆಯಂತೆ ಭಾರತದಲ್ಲಿನ ಸಿರಿವಂತ ಶೇಕಡ 01 ಜನ 2010ರಲ್ಲಿ ಸಿರಿವಂತಿಕೆಯ ಶೇಕಡ 40 ಪಾಲು ಹೊಂದಿದ್ದು, ಕಳೆದ ಐದು ವರ್ಷದಲ್ಲಿ ಈ ಪಾಲು ಶೇಕಡ 60ಕ್ಕೆ ಏರಿದೆ. ಭಾರತದ ಒಟ್ಟಾರೆ ಸಿರಿವಂತಿಕೆಯ ಶೇಕಡ 90 ಪಾಲನ್ನು ಶೇಕಡ 10 ಜನರು ಮಾತ್ರ ಹೊಂದಿರುತ್ತಾರೆ. ಉಳ್ಳವರು ಮತ್ತು ಇತರರ ನಡುವಿನ ಅಂತರದ ಅಗಾಧತೆಯನ್ನು ಇದು ಬಿಂಬಿಸುತ್ತದೆ. ಇದರ ಸಾಮಾಜಿಕ ಪರಿಣಾಮಗಳನ್ನು ಊಹಿಸಲಸಾಧ್ಯ. ಹೀಗಿರುವಾಗ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರಕಿಸುವ ಕ್ಷೇತ್ರ/ವಲಯ ಸಹಕಾರ ವಲಯ. ಇದರ ಮೌಲ್ಯಗಳು, ತತ್ವಗಳು, ಇದನ್ನೇ ಪ್ರತಿಪಾದಿಸುತ್ತವೆ. ಒಟ್ಟಾರೆ ಆರ್ಥಿಕತೆಯಲ್ಲಿ ಇದರ ಪಾಲು ಗಣನೀಯವಾಗಿ ಇಳಿಯುತ್ತಿರುವುದು ಖೇದಕರ ಸಂಗತಿಯಾಗಿರುತ್ತದೆ. ಸಾಮಾಜಿಕ ಕಳಕಳಿಯುಳ್ಳ ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಸಾಧ್ಯವಾಗಬಹುದಾದ ಸಹಕಾರ ವಲಯ ತನ್ನ 'ಅಸ್ಮಿತೆ'ಯನ್ನು ಉಳಿಸಿಕೊಳ್ಳಲು ತಮ್ಮ 'ಪ್ರತಿಮೆ'ಯನ್ನು ನಿರ್ಮಾಣ ಮಾಡುವಲ್ಲಿ ಎಡವುತ್ತಿರುವುದು ಆತಂಕಕಾರಿ, ಕಳವಳಕಾರಿ ವಿಷಯವಾಗಿರುತ್ತದೆ. ಈ ಚಳುವಳಿಯ/ವಲಯದ ನಾಯಕತ್ವವನ್ನು ವಹಿಸಿಕೊಂಡಿರುವ ನಾಯಕರುಇದರ ಬಗ್ಗೆ ಚಿಂತಿಸಬೇಕಾದ ಅವಶ್ಯಕತೆ ಈ ದಿನಮಾನಗಳಲ್ಲಿ ಬಹುಮುಖ್ಯ ಅಂಶವಾಗಿದೆ.

ಸಹಕಾರ 'ಅಸ್ಮಿತೆ' (identity) 'ಅನನ್ಯತೆ' ಒಂದು ಹೆಗ್ಗುರುತಾಗಿ, ಛಾಪು ಮೂಡಿಸುವಂತೆ (ಬ್ರಾಂಡ್) ಆಗಿ ರೂಪುಗೊಳ್ಳುವ ಅವಶ್ಯಕತೆ ಇದೆ. 'ಅಮೂಲ್' 'ಇಫ್ಕೊ' 'ನಂದಿನಿ' 'ಕ್ಯಾಂಪ್ಕೋ' 'ಸಫಲ್' ಬ್ರಾಂಡ್ ಆಗಿ ರೂಪುಗೊಂಡಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ಅದರಂತ ಅದೇ ರೀತಿ ಇಡೀ 'ಸಹಕಾರ'ವೇ 'ಒಂದು ಬ್ರಾಂಡ್' ಆಗಿ ರೂಪುಗೊಳ್ಳವ ಅವಶ್ಯಕತೆ ಇದೆ. ಸಹಕಾರ ಎಂದರೆ ಕಳಂಕರಹಿತ ಎಂಬ ಪ್ರತಿಮೆ (image) ಬೆಳೆಸಬೇಕಾದ ಅವಶ್ಯಕತೆ ಇದೆ. ಇದರಿಂದ ಮಾತ್ರ ಜನ ಸಾಮಾನ್ಯರನ್ನು, ನಿಮ್ನ ಶೋಷಿತ ವರ್ಗವನ್ನು ಒಳಗೊಂಡು ಸಹಕಾರ ವಲಯ ಬೆಳೆಯಲು ಸಾಧ್ಯವಾಗುತ್ತದೆ. ಹಾಲಿ ಒಟ್ಟಾರೆಯಾಗಿ ಸಹಕಾರ ವಲಯದ ಪ್ರತಿಮೆ ಪ್ರಜ್ವಲವಾಗಿದೆ ಎಂದೆನಿಸುವುದಿಲ್ಲ. ಮಾಧ್ಯಮಗಳಲ್ಲಿ ವರದಿಯಾಗುವಂತೆ ಕಳಂಕಗಳು, ದುರ್ನಡತೆಗಳು, ಆಪಾದನೆಗಳು, ಹೆಚ್ಚುಹೆಚ್ಚು, ಮೇಲಿನಿಂದ ಮೇಲೆ ಪ್ರತಿಧ್ವನಿಸುತ್ತಿರುವುದನ್ನು ಕಾಣುತ್ತಲಿದ್ದೇವೆ. ಇದರಿಂದಾಗಿ ಸಾರ್ವಜನಿಕವಾಗಿ ಮತ್ತು ಸರ್ಕಾರದಲ್ಲಿ ಪ್ರತಿಮೆಯು ನಕಾರಾತ್ಮಕವಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಸಕಾರಾತ್ಮಕ ಜನುಪಯೋಗಿ, ಸಾರ್ಥಕ ಸೇವೆ ಸೌಲಭ್ಯಗಳನ್ನು ಈ ವಲಯ ಒದಗಿಸಿಕೊಟ್ಟಿರುವುದು ಮತ್ತು ಒದಗಿಸಿಕೊಟ್ಟಿರುವುದರ ಬಗ್ಗೆ ಮಾಧ್ಯಮ ಮೌನವಾಗಿರುವುದು, ಫಲಾನುಭವಿಗಳು ಅದರ ಉಪಕಾರದ ಬಗ್ಗೆ ಚಕಾರ ಎತ್ತದಿರುವುದು ದುರ್ದೈವದ ಸಂಗತಿಯಾಗಿರುತ್ತದೆ. ಸಹಕಾರದ 'ಅಸ್ತಿತ್ವ'ದ ಪ್ರಶ್ನೆ ಮೂಡಿದಾಗ ಸಕಾರಾತ್ಮಕ ಅಂಶಗಳಿಂದ ಕೂಡಿದ 'ಪ್ರತಿಮೆ'ಯ ನಿರ್ಮಾಣ ಈ ದಿನಗಳ ಅವಶ್ಯಕತೆ.

ಈ ದಿಶೆಯಲ್ಲಿ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ICA) ವಿಶ್ವದ ಸಹಕಾರರಂಗವೇ ಒಂದು 'ಅಸ್ಮಿತೆ' (identity) ನಿರ್ಮಾಣ ಮಾಡುವಂತೆ ವಿಶ್ವದಎಲ್ಲಾ ಸಹಕಾರ ವಲಯಗಳಿಗೆ ಕರೆಕೊಟ್ಟಿದೆ.

‘ವಿಶ್ವ ಸಹಕಾರ ಅಸ್ಮಿತೆ’ (The Global Co-operative Identity) ಎಂದು ಕರೆದಿದೆ. ಅದಕ್ಕಾಗಿ ಒಂದು ‘ಗುರುತು’ (Mark)ನ್ನು (Marque) ತಮ್ಮ ‘ಬ್ರಾಂಡ್’ ನೊಡನೆ ಈ ‘ಗುರುತ’ನ್ನು ಅವರಿಂದ ಪಡೆದು ಉಪಯೋಗಿಸಿದಲ್ಲಿ ಈ ಉತ್ಪನ್ನ ‘ಸಹಕಾರ’ ವಲಯದ್ದು ಎಂದು ತಿಳಿದುಬರುತ್ತದೆ. ಇದನ್ನು ಏಳುಬಣ್ಣಗಳಲ್ಲಿ ನಿರ್ಮಿಸಿದೆ. ತಮ್ಮ ವಲಯಕ್ಕೆ ಸೂಕ್ತ ಬಣ್ಣವನ್ನು ಆರಿಸಿಕೊಳ್ಳಬಹುದು (Global @ identity coop) ವೆಬ್ ವಿಳಾಸವನ್ನು ಸಂಪರ್ಕಿಸಬಹುದಾಗಿದೆ. ‘Co-operative enterprises build a better world’ ‘ಸಹಕಾರ ಔದ್ಯೋಗಿಕ ಸಂಸ್ಥೆಗಳು ಉತ್ತಮ ಪ್ರಪಂಚವನ್ನು ನಿರ್ಮಾಣ ಮಾಡುತ್ತವೆ’ ಎಂಬುದು ಘೋಷವಾಕ್ಯವಾಗಿರುತ್ತದೆ. ಸಹಕಾರ ವಲಯವನ್ನೇ ಅವಲಂಭಿಸಲು ಏಳು ಕಾರಣಗಳಿವೆ.

- People together are stronger.
  ಜನ ಒಟ್ಟಿಗೆ ಇದ್ದಲ್ಲಿ ಸಮರ್ಥರಾಗಿರುತ್ತಾರೆ.
- Serving the needs of the people everywhere.
  ಎಲ್ಲಡೆಯಲ್ಲಿಯೂ ಜನರ ಅವಶ್ಯಕತೆಯನ್ನ ಪೂರೈಕೆ ಮಾಡಲಾಗುತ್ತಿದೆ.
- A growing and sustainable model of enterprise.
  ಬೆಳೆಯುತ್ತಿರುವ ಮತ್ತು ಸುಸ್ತಿರ ಔದ್ಯೋಗಿಕ ಮಾದರಿ.
- A proven self help model for good times and bad.
  ಒಳ್ಳೆಯ ಮತ್ತು ಕಷ್ಟಕಾಲದಲ್ಲಿ ಸಾಭೀತಾದ ಸ್ವಸಹಾಯ ಮಾದರಿ.
- Environmental concern, financial sustainability, social purpose.
  ಪರಿಸರ ಕಾಳಜಿ, ಆರ್ಥಿಕ ಸುಸ್ತಿರತೆ, ಸಾಮಾಜಿಕಉದ್ದೇಶ.
- Co-operative working together under a shared identity.
  ಹಂಚಿಕೊಂಡ ಅಸ್ಮಿತೆಯಡಿಯಲ್ಲಿ ಸಹಕಾರ ಸಂಘಗಳೆಲ್ಲವೂ ಒಟ್ಟಿಗೆಕಾರ್ಯಮಾಡುವುದು.
- People centered business, driving, social innovation, putting people first.
  ಜನಕೇಂದ್ರೀಕೃತ ವ್ಯವಹಾರ, ಸಾಮಾಜಿಕ ನಾವಿನ್ಯತೆಯ ಚಲನೆ, ಜನರು ಪ್ರಥಮ.

  ಈ ಕಾರಣಗಳೊಡನೆ ಕೋ–ಆಪ್ (co-op) ಗುರುತು ಉಪಯೋಗಿಸುವುದರಿಂದ ಆಗುವ ಏಳು ಪ್ರಯೋಜನಗಳನ್ನು ತಿಳಿಸಿದೆ.

- ಸಹಕಾರ ಮೌಲ್ಯಗಳೊಡನೆ ಮಿಲಿತಗೊಂಡಿರುತ್ತೇವೆಎಂಬುದನ್ನು



  ತಿಳಿಸುತ್ತದೆ. ಖಾಸಗಿ ಮತ್ತು ಬಂಡವಾಳಶಾಹಿಗಿಂತ ವಿಭಿನ್ನ ರೀತಿಯ ವ್ಯವಹಾರ ಎಂಬುದನ್ನು ತಿಳಿಸುತ್ತದೆ.
- ‘ಆನ್ ಲೈನ್’ನ ನಲ್ಲಿ ಅಸ್ಮಿತೆ’ ಗುರುತನ್ನು ‘ದೃಷ್ಯ ಮಾಧ್ಯಮದ ಗುರುತನ್ನಾಗಿ’ ಸಹಕಾರ ಸಂಘವು ಉಪಯೋಗಿಸಬಹುದಾಗಿದೆ.
- ಇ–ಅಂಚೆ ಮತ್ತು ವೆಬ್ ಪೇಜ್ ಗಳಲ್ಲಿ ‘ಗುರುತು’ ನೂತನ ವ್ಯವಹಾರ ಅವಕಾಶಗಳನ್ನು ಒದಗಿಸುತ್ತದೆ..
- ‘ಕೊ–ಆಪ್’ಗುರುತನ್ನು ಇ–ಅಂಚೆ ಸಹಿ, ಹೋಂ ಪೇಜ್ ಉತ್ಪನ್ನಗಳ, ಪ್ಯಾಕೇಜ್ ಗಳ ಮೇಲೆ ಬಳಸುವುದರಿಂದ ಸಹಕಾರ ಬ್ರಾಂಡ್ ನ ಜಾಹಿರಾತಿಗೆ ಅನುಕೂಲವಾಗುತ್ತದೆ. ದಿನದ 24 ಗಂಟೆ ವಾರದ 7 ದಿನ ವರ್ಷದ 52 ವಾರಗಳು.
- ಸಂಕ್ಷಿಪ್ತವಾಗಿರುವುದರಿಂದ, ವಿಶೇಷವಾಗಿರುವುದರಿಂದ ಸುಲಭವಾಗಿ ನೆನಪಿಸಿಕೊಳ್ಳಬಹುದು ಮತ್ತು ಪ್ರಚಾರ ಮಾಡಬಹುದು.
- ನಿಘಂಟು ಸಹಕಾರ (directory coop) ಸ್ವಯಂ ಪಟ್ಟಿಯಲ್ಲಿ ಸೇರುವುದರಿಂದ ಇತರರು ಸುಲಭವಾಗಿ ಗುರುತಿಸುತ್ತಾರೆ.
- ಡೊಮೈನ್ ಕೋ–ಆಪ್ ಮೂಲಕ ಕಡಿಮೆ ದರದಲ್ಲಿ ಹೆಸರನ್ನು ಗಳಿಸಲು ಸಾಧ್ಯ. ಆದುದರಿಂದಇದರಲ್ಲಿ ಹೂಡಿಕೆ ಮಾಡಿ.

21ನೇ ಶತಮಾನದಲ್ಲಿ ಸಹಕಾರ ಚಳುವಳಿ ಅಸ್ತಿತ್ವದಲ್ಲಿರಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಿದೆ. ಹೀಗಿರುವಾಗ ಸಹಕಾರತನ್ನ ‘ಅಸ್ಮಿತೆಯೊಡನೆ’ ಸಕಾರಾತ್ಮಕ ‘ಪ್ರತಿಮೆ’ ನಿರ್ಮಾಣವಾಗದಿದ್ದಲ್ಲಿ ಇದು ಅಸಾಧ್ಯವಾಗುತ್ತದೆ. ಈ ಶತಮಾನ ಮಾಹಿತಿ ತಂತ್ರಜ್ಞಾನದ ಯುಗದ ಆರಂಭದಲ್ಲಿದೆ. ಕ್ರಾಂತಿಕಾರಕ ಅವಿಷ್ಕಾರಗಳೊಡನೆ ನಾಗಾಲೋಟದ ಬದಲಾವಣೆಯನ್ನು ಕಾಣುತ್ತಲ್ಲಿದ್ದೇವೆ. ಅದರಂತೆ ಜನರ ಅವಶ್ಯಕತೆಗನುಸಾರ ನೂತನ ರೀತಿಯ ವಿಭಿನ್ನ ವಿಶಿಷ್ಟ ಸಹಕಾರ ಸಂಘಗಳು ರಚನೆಯಾಗದಿದ್ದಲ್ಲಿ ಈ ಸಹಕಾರ ಚಳುವಳಿ ಅಸ್ತಿತ್ವದಲ್ಲಿರಲು ಸಾಧ್ಯವಾಗುವುದಿಲ್ಲ. ಕೃಷಿ ಉತ್ಪಾದನೆ, ಮಾರಾಟ, ಗ್ರಾಹಕ ಕ್ಷೇತ್ರಗಳನ್ನೇ ಭಾರತದ ಪರಿಸ್ಥಿತಿಯಲ್ಲಿ ಅವಲೋಕನೆ ಮಾಡುವುದಾದರೆ ‘ಗಂಭೀರ’ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಕೃಷಿ ಉತ್ಪನ್ನ, ತೋಟಗಾರಿಕಾ

ಉತ್ಪನ್ನಗಳು ಸಂಘಟಿತ ಸಹಕಾರ ವಲಯದಲ್ಲಿ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಿರುವುದಿಲ್ಲ. ಉತ್ಪನ್ನ ಕ್ಷೇತ್ರದಲ್ಲಿ ಸಣ್ಣ ಅತಿ ಸಣ್ಣ ರೈತರು ಸಾಮೂಹಿಕ ಕೃಷಿ ಅಳವಡಿಸಿಕೊಂಡಿದ್ದಲ್ಲಿ ಮತ್ತು ಮಾರಾಟ ವ್ಯವಸ್ಥೆ ಮಾಡಿಕೊಂಡಲ್ಲಿ ಆಧುನಿಕ ತಂತ್ರಜ್ಞಾನದಲ್ಲಿ ಹೆಚ್ಚು ಇಳುವರಿ ಮತ್ತು ಗುಣಮಟ್ಟದ ಆಧುನಿಕ ಗ್ರಾಹಕರ ಅವಶ್ಯಕತೆಗನುಸಾರ ಪೂರೈಕೆ ಸಾಧ್ಯ. ಖರೀದಿ ಮತ್ತು ಮಾರಾಟದಲ್ಲಿ, ದಾಸ್ತಾನು ಮಾಡುವಲ್ಲಿ ಆಧುನಿಕ ಸೌಲಭ್ಯಗಳನ್ನು ಸಂಘಟಿತರಾಗಿ ರಚಿಸಿಕೊಂಡು ಸಾಮಾನ್ಯ ಸೌಲಭ್ಯ ಉಪಯೋಗಿಸಿಕೊಂಡಲ್ಲಿ ವೆಚ್ಚವನ್ನೂ ಕಡಿತಗೊಳಿಸಬಹುದು ಮತ್ತು ಮಾರಾಟದಲ್ಲಿ ಹೆಚ್ಚಿನ ದರವನ್ನು ಗಳಿಸಬಹುದಾಗಿದೆ. ಬಹುರಾಷ್ಟ್ರೀಯ ಕಂಪನಿಗಳೂ ಆವರಿಸಿಕೊಂಡಿರುವ ಚಿಲ್ಲರೆ ಮಾರಾಟ ಕ್ಷೇತ್ರದೊಡನೆ ಸಂಘಟನೆಯಿಂದ 'ಚೌಕಾಶಿ' ಶಕ್ತಿ ಬಂದೊದಗುತ್ತದೆ. ಎಲ್ಲವನ್ನು 'ಆನ್ ಲೈನ್'ನಲ್ಲಿ ಮಾರಾಟ ಮಾಡುವ ಮತ್ತು ಕೊಳ್ಳುವ ಶಕ್ತಿ, ಯುಕ್ತಿ ನಿರ್ಮಾಣವಾಗಿರುವ ಈ ದಿನಗಳಲ್ಲಿ ಉತ್ಪಾದಕರು ಈ ಆಧುನಿಕ ಉತ್ಪನ್ನ ಸಂಸ್ಕರಣೆ, ಸಂಗ್ರಹಣೆ, ಮಾರಾಟ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳದಿದ್ದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡದಿದ್ದಲ್ಲಿ ಈ ಕ್ಷೇತ್ರ ಅಳಿವಿನಂಚಿನಲ್ಲಿದೇ ಎಂದೇ ತಿಳಿಯಬೇಕಾಗುತ್ತದೆ. ಇದರಿಂದ ಉತ್ಪಾದಕರು ನಷ್ಟ ಹೊಂದುತ್ತಾರೆ. ಮಧ್ಯವರ್ತಿಗಳು ಹೆಚ್ಚು ಲಾಭ ಪಡೆಯುತ್ತಾರೆ.

ಗ್ರಾಹಕ ಕ್ಷೇತ್ರದಲ್ಲಿ ಅತ್ಯಾಧುನಿಕ ತಂತ್ರಾಂಶಗಳು ಲಭ್ಯವಿದ್ದು ವಸ್ತು ಖರೀದಿ, ದಾಸ್ತಾನು, ಬೆಲೆ ನಿಗಧಿ ಪಡಿಸುವುದು, ಮಾರಾಟ ಮಾಡುವುದು, ದಾಸ್ತಾನು ನಿರ್ವಹಣೆಯವರೆಗೆ ಸುಲಭವಾಗಿ ನಿರ್ವಹಿಸ ಬಹುದಾಗಿದೆ. ಹಿಂದಿನ ಜಾಡಿನಲ್ಲಿ ನಡೆದರೆ ಖಾಸಗಿಯವರು ಮಾತ್ರ ಅಸ್ತಿತ್ವದಲ್ಲಿದ್ದು ಗ್ರಾಹಕ ಸಹಕಾರ ಸಂಘಗಳು ಇಲ್ಲವಾಗುತ್ತವೆ. ಹಾಲು ಉತ್ಪಾದನೆಯಲ್ಲಿ ಯಶಸ್ವಿಯಾದ ಕೆಲವು ರಾಜ್ಯಗಳಲ್ಲಿ ಖಾಸಗಿ ಕ್ಷೇತ್ರದ ಪ್ರಭಾವ ರಾಜಕೀಯ ನಾಯಕರ ಹಿತಾಸಕ್ತಿಯಿಂದ ಸಹಕಾರಕ್ಷೇತ್ರ ಬಳಲಿದೆ. ಕೃಷಿ ಪತ್ತು ಕ್ಷೇತ್ರದಲ್ಲಿ ದೀರ್ಘಾವಧಿ ಸಾಲ ಕ್ಷೇತ್ರ ಬಹು ಪಾಲು ಇಲ್ಲದಾಗಿದೆ. ಅಲ್ಪಾವಧಿ ಕೃಷಿ ಸಾಲ ಕ್ಷೇತ್ರದಲ್ಲಿ ಇದರ ಪಾಲು ಶೇಕಡ 20 ಮಾತ್ರ. ಉತ್ಪಾದನಾ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳು ಅತ್ಯಂತ ಪ್ರಭಲವಾಗಿದ್ದು, ಈಗ ಬಹುತೇಕ ನಶಿಸಿದೆ. ರೈತರ ಸಹಕಾರ ವಲಯವು ಹೊಸ ಆಯಾಮವನ್ನು ಕಂಡು ಕೊಳ್ಳದಿದ್ದಲ್ಲಿ ಖಾಸಗಿ ವಲಯದಿಂದ ರೈತರು ಶೋಷಣೆ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಕೇವಲ ಸರ್ಕಾರದ ಅನುದಾನ ಸಬ್ಸಿಡಿಯನ್ನು ಅವಲಂಬಿಸಿ ಕೃಷಿ ಸಾಧ್ಯವೇ? ಕೃಷಿ ಕ್ಷೇತ್ರದ ಕೊಡುಗೆಒಟ್ಟಾರೆ ಭಾರತದ ಜಿ.ಡಿ.ಪಿ.ಗೆ ಕೇವಲ ಶೇಕಡ 14. ಇದಕ್ಕಾಗಿ ಎಷ್ಟರ ಮಟ್ಟಿಗೆ ಸಹಾಯ ನೀಡಬಹುದು ಎಂಬ ಧೋರಣೆಗಳು ಆತಂಕಕಾರಿಯಾಗಿದೆ. ಕೇವಲ ಶೇಕಡ 14 ಆದರೂ ಇಡೀ ದೇಶದ ಆಹಾರ, ಪ್ರಮುಖವಾದ ಅಗತ್ಯತೆ ಪೂರೈಕೆ ಇದರಿಂದಲೇ ಸಾಧ್ಯವಾಗುತ್ತಿಲ್ಲವೇ? ಸಹಕಾರ ಕ್ಷೇತ್ರ ಉತ್ಪಾದನೆ ಮತ್ತು ಮಾರಾಟದಲ್ಲಿ ಅತಿ ಹೆಚ್ಚು ಸಹಕಾರಿ ಎಂಬುದನ್ನೇ ಮರೆತಂತಿದೆ. ಇಂದಿನ ಅಗತ್ಯತೆ ಬದ್ಧತೆಯುಳ್ಳ ದಕ್ಷ, ದೂರದೃಷ್ಟಿಯುಳ್ಳ ನಾಯಕತ್ವ ಕೇವಲ ಸರ್ಕಾರವನ್ನೇ ಹೊಣೆಮಾಡುವ ಬದಲಿಗೆ ಸಹಕಾರ ಕ್ಷೇತ್ರ ಬೆಳೆಸಿದಲ್ಲಿ ನವನಾವಿನ್ಯತೆ, ನವೀನ ತಾಂತ್ರಿಕತೆ ಮತ್ತು ಮಾಹಿತಿ ತಂತ್ರಜ್ಞಾನ ಅಳವಡಿಸಿಕೊಳ್ಳಬಲ್ಲ ಸಹಕಾರ ಸಂಘಗಳನ್ನು ಸಂಘಟಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಸಂಘಟನಾಕಾರರ ಅವಶ್ಯಕತೆ ಇದೆ. ಕೃಷಿಯೇತರ ಸಹಕಾರ ಪತ್ತಿನ ಕ್ಷೇತ್ರ ಉತ್ತಮಕಾರ್ಯ ನಡೆಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಅನೇಕ ಸಹಕಾರ ಸಂಘಗಳು/ಬ್ಯಾಂಕ್‌ಗಳು ಆಧುನಿಕ ತಂತ್ರಾಂಶಗಳನ್ನು ಅಳವಡಿಸಿಕೊಂಡಿರುವುದು ಸಂತಸದ ಸಂಗತಿಯಾಗಿದೆ. ನಗರ ಪ್ರದೇಶದಲ್ಲಿ ಸಾಗಾಣಿಕೆಯಲ್ಲಿ ತಂತ್ರಾಂಶ ಆಧಾರಿತ 'ಆಪ್'ಗಳ ಅಳವಡಿಕೆ (ಓಲೋ/ಊಬರ್) ಬಹಳಷ್ಟು ಪ್ರಭಾವಿಯಾಗಿದೆ. ಯುವಜನತೆಗೆ ಇದರ ಅವಲಂಭನೆ ಅನಿವಾರ್ಯವಾಗಿದೆ. ವಾಹನ



ಮಾಲೀಕರ ಚಾಲಕರಿಗೆ ಇದರಲ್ಲಿ ಎಷ್ಟುಪಾಲು ಸಿಗಬಹುದಿತ್ತೋ ಅಷ್ಟುಪಾಲು ಸಿಗುತ್ತಿಲ್ಲ ಎಂಬ ಕೂಗು ಕೇಳಿಬರುತ್ತಿದೆ. ಗ್ರಾಹಕರು ಹೆಚ್ಚಿನ ಹಣ ವ್ಯಯ ಮಾಡಬೇಕಾಗಿದೆ. ಅವರೇ ಸಂಘಟಿತರಾಗಿ 'ಪ್ಲಾಟ್‌ಫಾರಂ' ತಾವೇ ಹೊಂದಿ ಸಹಕಾರ ಸಂಘದಡಿಯಲ್ಲಿ ನಡೆಸಬಹುದಾಗಿದೆ. ಇದರಿಂದ ಗ್ರಾಹಕರಿಗೂ ವೆಚ್ಚ ಕಡಿಮೆ ಮಾಡಬಹುದು ಮತ್ತು ಅವರು ಲಾಭವನ್ನು ಪಡೆಯಬಹುದಾಗಿದೆ. ಈ ರೀತಿಯಲ್ಲಿ ಶತಮಾನದ ನವೀನ ಅವಶ್ಯಕತೆಗಳ ಪೂರೈಕೆಗಾಗಿ ನವೀನ ಆಲೋಚನೆಗಳ ರೀತಿ ಸಹಕಾರ ಸಂಘಗಳ ರಚನೆಅವಶ್ಯಕತೆ ಇದೆ. ಯುವಕರು ಹೆಚ್ಚಿನ ರೀತಿಯಲ್ಲಿ ಪಾಲ್ಗೊಳ್ಳುವುದರಿಂದ ಹೊಸ ಆಲೋಚನೆಗಳು ಮೂಡಲು ಸಾಧ್ಯ.

ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ICA) ಯು ಇದನ್ನು ಮನಗಂಡು ಈ ಕೆಳಕಂಡಂತೆ ಕೆಲವು ಅಂಶಗಳನ್ನು ಮುಂದಿಟ್ಟಿದೆ. ಅವು

1. ಬಿಕ್ಕಟ್ಟಿನಿಂದ ಬೆಳವಣಿಗೆಯಡೆಗೆ ಆಗಬೇಕಾದ ಕಾರ್ಯಗಳ ಬಗ್ಗೆ ಇತ್ತೀಚೆಗಿನ ಬೆಳವಣಿಗೆಗಳ ಬಗ್ಗೆ ಪರಾಮರ್ಶೆ. ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಆಲೋಚನೆ.

2. ಕೃಷಿ ಮತ್ತು ಬ್ಯಾಂಕಿಂಗ್ ಪ್ರಮುಖ ವಲಯಗಳಾಗಿದ್ದು ಇವುಗಳಲ್ಲಿ ಸಹಕಾರ ಮೌಲ್ಯಗಳನ್ನು ಹದಗೊಳಿಸುವುದು.

3. ಭವಿಷ್ಯದಲ್ಲಿ ಸಹಕಾರ ಸಂಘಗಳ ಅಸ್ತಿತ್ವಕ್ಕಾಗಿ ಅನುಸರಿಸಬೇಕಾದ ತಂತ್ರಗಾರಿಕೆ (ಆಗಿರುವ ತಪ್ಪಗಳನ್ನು ಪುನರಾವರ್ತಿಸದೇ ಇರುವುದು) ರೂಪಿಸಿವುದು.

ಇವುಗಳ ಬಗ್ಗೆ ಅಧ್ಯಯನ ನಡೆಸಿ 21ನೇ ಶತಮಾನದಲ್ಲಿ ಸಹಕಾರದ ಬೆಳವಣಿಗೆಗೆ ಅಗತ್ಯ ಅಂಶಗಳನ್ನು ಈ ಕೆಳಕಂಡಂತೆ ಗುರುತಿಸಿರುತ್ತದೆ.

- ಸಾಮಾನ್ಯ ಸಿರಿವಂತಿಗೆಯ ಸೃಷ್ಟಿಗೆ ಅಗತ್ಯ ಆರ್ಥಿಕ ಸಮರ್ಥತೆಯನ್ನು ಹೆಚ್ಚಿಸುವುದು. (ಆರ್ಥಿಕ ಲಾಭ ಮಾತ್ರಅಲ್ಲ).
- ಆಸ್ತಿಗಳು, ಉಳಿತಾಯ, ಸಹಕಾರದಲ್ಲಿ ಹೂಡಿಕೆಯ ಹೆಚ್ಚಳ (ಬಂಡವಾಳ / ಜವಾಬ್ದಾರಿ ಅನುಪಾತ).
- ವಸ್ತು ಮತ್ತು ಸೇವೆಗಳಲ್ಲಿ ನೂತನ ಪ್ರಯೋಗಗಳು / ನಾವಿನ್ಯತೆ ಮತ್ತು ವೈವಿಧ್ಯೀಕರಣ.
- ಒಟ್ಟಾರೆ ಮಾರುಕಟ್ಟೆಯಲ್ಲಿ ನಮ್ಮ ಪಾಲು (ಕೇವಲ ಗಳಿಸಿದ ಸಂಖ್ಯೆಯಲ್ಲ).
- ಸುತ್ತಲ ಸಮೂಹಕ್ಕೆ ವ್ಯವಹಾರದಿಂದ ಆಗುವ ಪ್ರಯೋಜನ.
- ಒಟ್ಟಾರೆ ಜನ ಸಂಖ್ಯೆಯಲ್ಲಿ ಸಹಕಾರದಲ್ಲಿ ಭಾಗಿಯಾಗಿರುವ ಸದಸ್ಯರು (ಶೇಕಡ, ಅನುಪಾತ).
- ಉದ್ಯೋಗ ಸೃಷ್ಟಿ, ಅವಧಿ ಮತ್ತು ಗುಣಮಟ್ಟ.
- ಸಮಾನತೆ, ಲಾಭ ಮತ್ತು ವೇತನ ಪಾವತಿ ಅನುಪಾತ, ಸದಸ್ಯರಿಗೆ ಲಾಭದ ಹಂಚಿಕೆ, ಲಿಂಗಭೇದದ ಬಗ್ಗೆ ಜಾಗೃತಿ.
- ಪ್ರಜಾಸತ್ತಾತ್ಮಕ ನಿಯಂತ್ರಣ, ಭಾಗೀದಾರರ ಭಾಗವಹಿಸುವಿಕೆ, ನಿರ್ಧಾರ ಕೈಗೊಳ್ಳುವಲ್ಲಿ ಅವರ ಪಾತ್ರ.
- ಮಾನವ ಸಂಪನ್ಮೂಲದ ಅಭಿವೃದ್ಧಿ, ಸೃಷ್ಟಿ – ಔದ್ಯೋಗಿಕ ಸಂಸ್ಥೆಯಲ್ಲಿ ಮತ್ತು ಸುತ್ತಲಿನ ಸಮೂಹ ಪರಿಸರದಲ್ಲಿ.
- ಭಾಗೀದಾರರ ಸಾಮಾಜಿಕ ರಕ್ಷಣಾ ಅಂಶಗಳ ಮೇಲೆ ಪರಿಣಾಮ. ಆರೋಗ್ಯ, ಶಿಕ್ಷಣ, ವಸತಿ, ಪಿಂಚಣಿ, ಮಕ್ಕಳ, ಹಿರಿಯ ನಾಗರೀಕರ ಅವಶ್ಯಕತೆಗಳ ಪೂರೈಕೆ.
- ಸೇವೆಗಳನ್ನು ಒದಗಿಸುವಲ್ಲಿಅವಧಿ, ಭೌಗೋಳಿಕ ವಿಸ್ತೀರ್ಣ, ಗುಣಮಟ್ಟ ಇವುಗಳನ್ನೂ ಗಣನೆಗೆ ತೆಗೆದುಕೊಳ್ಳುವುದು.
- ಸರ್ಕಾರ ಮತ್ತು ಇತರೆ ಸಂಸ್ಥೆಗಳಿಂದ ದೂರವನ್ನು ಕಾಪಾಡುವ ಸಾಮರ್ಥ್ಯವನ್ನು ಗಳಿಸುವುದು. ದೂರಗಾಮಿಯಾಗಿ ಸ್ಥಳೀಯರ ಸ್ಥಳೀಯ ಅವಶ್ಯಕತೆ ಮತ್ತು ನಿರೀಕ್ಷೆಗಳನ್ನು ಪೂರೈಸುವುದು.
- ಸ್ಥಳೀಯವಾಗಿ, ಪ್ರಾಂತೀಯವಾಗಿ, ರಾಷ್ಟ್ರ ಮಟ್ಟದಲ್ಲಿ ಪ್ರಾದೇಶಿಕವಾಗಿ ಮತ್ತು ವಿಶ್ವ ಮಟ್ಟದಲ್ಲಿ ಸಂಯೋಜಿತ ಸಮಾಜೋ – ಆರ್ಥಿಕ ವ್ಯವಸ್ಥೆ ಅಭಿವೃದ್ಧಿಯ ಸಾಮರ್ಥ್ಯವನ್ನು ಗಳಿಸುವುದು (ಸ್ಥಳೀಯವಾಗಿ ಚಿಂತಿಸಿ, ವಿಶ್ವ ಮಟ್ಟದಲ್ಲಿ ಆಚರಿಸಿ).
- ಸುತ್ತಲ ಸಮೂಹದ ಮೇಲೆ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಸಕಾರಾತ್ಮಕ ಪರಿಣಾಮ ಬೀರುವಂತೆ ಕಾರ್ಯ ನಿರ್ವಹಿಸುವುದು.
- ಮೌಲ್ಯ ಸರಪಣಿ, ಒಗ್ಗಟ್ಟಿನ ಸರಪಣಿಗಳನ್ನು ನ್ಯಾಯಯುತ ವ್ಯವಹಾರಗಳಿಗಾಗಿ, ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಗಾಗಿ ನಿರ್ಮಾಣ ಮಾಡುವುದು.
- ಪರಿಸರ ಸಮರ್ಥತೆ, ಪರಿಸರದ ಮೇಲಾಗುವ ದುಷ್ಪರಿಣಾಮಗಳ ತಡೆಗಟ್ಟುವಿಕೆ, ಭೂಭೌಗೋಳಿಕ, ಭೌತಿಕ ಮತ್ತು ಜೀವ ಜಗತ್ತು ಮಾನವನನ್ನು ಒಳಗೊಂಡಂತೆ ಆಗುವ ಪರಿಣಾಮಗಳ ಬಗ್ಗೆ ಎಚ್ಚರಿಕೆ ಕ್ರಮಗಳು ಉದಾ : ಮಣ್ಣಿನ ಫಲವತ್ತತೆ, ಸಾವಯವ ಕೃಷಿ ಇವುಗಳ ಬಗ್ಗೆ ಆಲೋಚನೆ.
- ಅನೌಪಚಾರಿಕ ವಲಯದಿಂದ ಔಪಚಾರಿಕ ವಲಯಕ್ಕೆ ಪರಿವರ್ತನೆ, ನ್ಯಾಯಯುತ ಆರ್ಥಿಕತೆಗೆ ಬಲವರ್ಧನೆ ಉದಾ : ಕೂಲಿ ಕಾರ್ಮಿಕರು, ವಲಸೆಗಾರರು, ನ್ಯಾಯ ಒದಗಿಸುವುದು.

21ನೇ ಶತಮಾನದಲ್ಲಿಯೂ ವಿಶ್ವ ಶಾಂತಿಯಿಂದ ನೆಲಸಬೇಕೆಂದರೆ ಆರ್ಥಿಕ ಅಸಮಾನತೆಯ ಅಂತರ ಕುಗ್ಗಲೇಬೇಕು. ಸಮಾನತೆಯ ಸಮಾಜದ ದೃಷ್ಟಿಗೆ ಎಲ್ಲರನ್ನೂ ಒಳಗೊಂಡ ಆರ್ಥಿಕ ಬೆಳವಣಿಗೆ ಅತ್ಯಗತ್ಯ. ಈ ಸಾಧ್ಯತೆಗೆಅತ್ಯಂತ ಸಶಕ್ತ ಮತ್ತು ಸರಿಹೊಂದುವ ವಲಯಎಂದರೆ ಸಹಕಾರ ವಲಯ. ದಿಟ ರೂಪದ 'ಸಹಕಾರ ಚಳುವಳಿ' ಆದುದರಿಂದ ಸಹಕಾರ ಸಂಘಗಳು ತಮ್ಮ'ಅಸ್ಮಿತೆ' ಗಳಿಸುವಲ್ಲಿ ಸಕಾರಾತ್ಮಕ 'ಪ್ರತಿಮೆ' ನಿರ್ಮಾಣವಾದಲ್ಲಿ ಮಾತ್ರ 21ನೇ ಶತಮಾನದಲ್ಲಿ ಸಹಕಾರ ಚಳುವಳಿಯಲ್ಲಿ ಮುಂಚೂಣಿಯಲ್ಲಿರಲು ಸಾಧ್ಯ.

**ಚಿಳಲಲ್ಲಿ ಬೇರಲ್ಲ, ಮುಂಡಕಾಂಡಗಳಲ್ಲ ।**
**ತಳಿರಲ್ಲ, ಮಲರಲ್ಲ, ಕಾಯಿಹಣ್ಣಲ್ಲ ॥**
**ಎಲೆ ನೀನು ವಿಶ್ವವೃಕ್ಷದಳ್ ಎಲೆಯೊಲೊಂದು ನೀಂ ।**
**ತಿಳಿದವನು ನೆರವಾಗು– ಮಂಕುತಿಮ್ಮ ॥**

**– ಡಿ.ವಿ.ಜಿ**

(ಆದಾರ : ಎನ್.ಸಿ.ಡಿ.ಸಿ. ತರಬೇತಿ ಕೇಂದ್ರ (ಅನಾಕ್) ಅಧ್ಯಯನ ಸಾಮಗ್ರಿ (ICA) ಅಂ.ವೈ.ಸಂ. The Global Co-operative Identity ಕಿರುಹೊತ್ತಿಗೆ Co-operative growth for the 21st century-ICA)

- CICOPA